MR. SPEAKER.—Unless I know how much time you require, it would be difficult for me to say anything.

SRI S. R. BOMMAI. - If the consent is given, it may be ended in only a short time.

MR. SPEAKER.—The Hon. Leader of the Opposition wants to raise the preliminary submission regarding the notice of adjournment motion. If others also were to insist on speaking, then of course, it is for the Speaker to give permission or withhold permission.

SRI S. R. BOMMAI —Notice of the Business Advisory Committee meeting has been issued. I request for ten minutes adjournment of the House.

MR. SPEAKER.—In the meanwhile we are having the Business Advisory Committee meeting. The House is now adjourned to meet after the fifteen minutes.

The House adjourned at Forty Five Minutes Past Three of the Clock and reassembled at forty five Minutes past four of the Clock.

(MR. SPEAKER in the Chair)

Notice of an adjournment motion

re : Holding elections to the Local Bodies

SRI S.R. BOMMAI.—I have given notice under rule 50 of the Rules of Procedure along with my friends. The notice reads thus :

That it was announced by the Government and by the concerned Minister that Elections to the Municipalities, Co-operations and Village Panchayats in the State would be held and completed by the end of the June 1978. In persuance of this statement, calendar of events of election of Municipalities and Village Panchayats were announced. The date of Election for the Municipalities was fixed at 28th May 1978. Number of candidates have filed their nominations in all the Municipalities and have campaigned in support of their candidatures spending their money and energy. But to the surprise of one and all concerned the Government took a decision of postpone the Elections to the municipalities on 25th May 1978.

The Government has also postponed the Elections to the Municipal Corporation in the State to the month of August and has not issued directions to hold the Election to the Corporations on a particular date in the month of August. These actions of the Government in postponing the Election the Municipalities and the

Corporations is with ulterior motive of getting majority in the Legislative Council. As the Government is afraid of not getting majority in these bodies consequently not succeeding in the Election to the Council from the Local Authority Constituency.

This action of the Government is with a sole object of securing majority in the Legislative Council wherein the opposition has a majority at present. By these actions of the Government the people of the State have been deprived of their rights to elect their representativas to these Local Bodies and is attempting to function through its administrations in an un-democractic manner.

This is a matter of urgent great public importance. Therefore, we give Notice that this House stand adjourned to discuss the matter of postponement of Elections to Local Bodies, Municipalities, Municipal Corporations and Village Panchayats in the State.

Thanking you,

Yours sincerely,

Sd/-

S. R. BOMMAI
M. C. BASAPPA
D. T. MAYANNA
G. S. SHIVANANJAPPA
Y. RAMAKRISHNA
A. LAKSHMISAGAR
JEEVARAJ ALWA
U. B. BORKAR
BHAVU RAO DESHPANDE
R. S. NADONI
H. GANGADHARAN
GOVIND P. VADEYARAJ AND
OTHERS.

ಮುನಿಸಿಪಲ್, ಟೌನ್ ಮುನಿಸಿಪಲ್ ಮತ್ತು ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯ ಬಗ್ಗೆ ಒಂದು ಇತಿಹಾಸವಿದೆಯೆಂದು ಹೇಳಿದರೆ ತಪ್ಪಾಗಲಿಕ್ಕೆ ಇಲ್ಲ. ಸುಮಾರು ೪ ವರ್ಷಗಳಿಂದ ಈ ರಾಜ್ಯದ ಕಾರ್ಪೊರೇಷನ್ ಮತ್ತು ಅನೇಕ ಮುನಿಸಿಪಾಲಿಟಿಗಳನ್ನು ಸೂಪರ್‌ಸೀಡ್ ಮಾಡಿ ಅಡ್ಮಿನಿಸ್ಟ್ರೇಟರನ್ನು ನೇಮಿಸಿ ಸರ್ಕಾರ ತಮ್ಮ ಆಡಳಿತವನ್ನು ನಡೆಸುತ್ತಿದ್ದಾರೆ. ಜನರು ತಮ್ಮ ಪ್ರತಿನಿಧಿಗಳನ್ನು ಆರಿಸತಕ್ಕ ಮತ್ತು ಸ್ಥಾನೀಕ ಸಂಸ್ಥೆಗಳಲ್ಲಿ ತಮ್ಮ ವ್ಯವಹಾರಗಳನ್ನು ತಾವೇ ನಡೆಸಿಕೊಂಡು ಹೋಗಲಿಕ್ಕೆ ಕಳೆದ ೪ ವರ್ಷಗಳಿಂದ ಕಸಿದುಕೊಂಡಿದ್ದಾರೆ. ಅದರ ಬಗ್ಗೆ ನಾವು ಪದೇ ಪದೇ ಒತ್ತಾಯ ಮಾಡಿ

ದ್ದಾಗ್ಯೂ ತಾವು ಚುನಾವಣೆಗಳನ್ನು ಮಾಡದೇ ಮುಂದಕ್ಕೆ ಹಾಕಿ ಅಡ್ಮಿನಿಸ್ಟ್ರೇಟರ್‌ಗಳನ್ನು ಹಾಕಿದ್ದೀರಿ. ಚುನಾವಣೆಗಳನ್ನು ನಡೆಸಿ ಎಂದು ನಾವು ಹಿಂದಿನಿಂದಲೂ ಒತ್ತಾಯ ಮಾಡಿಕೊಂಡೇ ಬಂದಿದ್ದೇವೆ. ಒಂದು ಸಲ ಮಾತ್ರ ಚುನಾವಣೆಯಾದ ಮೇಲೆ ಮಾನ್ಯ ಮಂತ್ರಿಗಳವರು ಉತ್ತರ ಕೊಟ್ಟರು, ಆದಷ್ಟು ಬೇಗ ನಾವು ತಾಲ್ಲೂಕ್ ಬೋರ್ಡ್, ಮುನಿಸಿಪಲ್ ಎಲೆಕ್ಷನ್ ಮತ್ತು ಕಾರ್ಪೊರೇಷನ್‌ಗಳ ಚುನಾವಣೆಯನ್ನು ಜೂನ್ ೩೦ ರೊಳಗೆ ಮಾಡುತ್ತೇವೆಂದು' ಅದರ ಪ್ರಕಾರ ಕ್ಯಾಲೆಂಡರ್ ಆಫ್ ಈವೆಂಟ್ಸ್ ಪ್ರಿಂಟ್ ಆಯಿತು, ನಾಮಿನೇಷನ್ ಫೈಲ್ ಕೂಡ ಆಯಿತು. ವಿತ್ ಡ್ರಾ ಮಾಡುವ ಡೇಟ್ ಕೂಡ ಆಯಿತು. ಆ ಪ್ರಕಾರ ಕ್ಯಾಲೆಂಡೆರ್ ಆಫ್ ಈವೆಂಟ್ಸ್ ಹಾಕಿದ ಮೇಲೆ ಅನೇಕ ಜನ ನಾಮಿನೇಷನ್ ಪೇಪರನ್ನು ಮುನಿಸಿಪಲ್‌ನಲ್ಲಿ ಫೈಲ್ ಮಾಡಿದರು ಅನೇಕ ಜನ ಅವಿರೋಧವಾಗಿಯೂ ಆಯ್ಕೆಯಾಗಿದ್ದಾರೆ. ಕೆಲವು ಕಡೆ ಕಂಟೆಸ್ಟ್ ಇದ್ದು ಚುನಾವಣೆ ನಡೆಯಿತು. ಆಗ ಪಕ್ಷದ ವತಿಯಿದ ಚುನಾವಣೆಗೆ ಕಾಂಡಿಡೇಟ್ಸ್ ಹಾಕಬೇಕೋ ಹಾಕಬಾರದೋ, ಅವರಿಗೆ ಸಿಂಬಲ್ ಕೊಡಬೇಕೋ, ಕೊಡಬಾರದೋ ಎನು ವ ಪ್ರಶ್ನೆ ಚುನಾವಣೆಯ ನೋಟಿಫಿಕೇಷನ್ ಆದಾಗ ಬರಲಿಲ್ಲ. ಚುನಾವಣೆ ಇನ್ನು ೩ ದಿವಸ ಇದೆ ಎನ್ನುವಾಗ ಚುನಾವಣಾ ಅಭ್ಯರ್ಥಿಗಳು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದರು, ಹಣವನ್ನು ಖರ್ಚು ಮಾಡಿದ್ದರು, ಪ್ರಚಾರ ಮಾಡಿದ್ದರು ಆಗ ಒಂದೇ ಸಲ ಈ ಚುನಾವಣೆಗಳನ್ನು ಮುಂದಕ್ಕೆ ಹಾಕುವ ನಿರ್ಣಯ ಸರ್ಕಾರ ತೆಗೆದು ಕೊಂಡಿದೆ, ಅಂದರೆ ಅದರ ಹಿನ್ನೆಲೆ ಏನು ಎಂದರೆ, ತಾಲ್ಲೂಕ್ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೇ ಹೆಚ್ಚು ಕಡೆಗೆ ಬಹುಮತ ಬಂದಿದೆ ವಿರೋಧ ಪಕ್ಷಕ್ಕೆ ಕಡಿಮೆ ಬಂದಿದೆ ಅದನ್ನು ನಾನು ಒಪ್ಪುತ್ತೇನೆ. ಆದರೆ ಮುಂದೆ ಟೌನ್. ಪಂಚಾಯ್ತಿ ಚುನಾವಣೆಗಳನ್ನು ನಡೆಸಿದರೆ ವಿರೋಧ ಪಕ್ಷದವರೇ ಆರಿಸಿ ಬರಬಹುದೆಂಬ ಉದ್ದೇಶದಿಂದ, ಅಂದರೆ ಅದಕ್ಕೆ ಕಾರಣವೇನೆಂದರೆ ೪ ಟೌನ್ ಪಂಚಾಯ್ತಿಗಳಲ್ಲಿ ವಿರೋಧಪಕ್ಷದವರೇ ಮೆಜಾರಿಟಿಯಲ್ಲಿ ಆರಿಸಿ ಬಂದಿರುವುದು. ಅದನ್ನು ನೋಡಿಯೇ ಸರ್ಕಾರ ಮುನಿಸಿಪಲ್ ಎಲೆಕ್ಷನ್‌ನನ್ನು ಮುಂದಕ್ಕೆ ಹಾಕುವುದಕ್ಕೆ ಅಲೋಚನೆ ಮಾಡಿದೆ ಎನ್ನುವ ಭಾವನೆ ನಮ್ಮಲ್ಲಿ ಬಂದಿದೆ. ಅದಕ್ಕೆ ಕಾರಣವೇನೆಂದರೆ, ಮುನಿಸಿಪಲ್ ಮೆಂಬರ್‌ಗಳೇ ಲೆಜಿಸ್ಲೇಟಿವ್ ಕೌನ್ಸಿಲ್‌ಗೆ ಸದಸ್ಯರನ್ನು ಆರಿಸಬೇಕಾಗಿದೆ. ಕೌನ್ಸಿಲ್‌ನ ಲೆಕ್ಕಾಚಾರ ತೆಗೆದುಕೊಂಡರೆ, ಸರ್ಕಾರಕ್ಕೆ ಅಲ್ಲಿ ಬಹುಮತವಿಲ್ಲ. ವಿರೋಧ ಪಕ್ಷವೇ ಕೌನ್ಸಿಲ್‌ನಲ್ಲಿ ಬಹುಮತ ಪಡೆದಿದೆ. ಜೂನ್ ೩೦ಕ್ಕೆ ೨೧ ಸ್ಥಾನೀಕ ಸಂಸ್ಥೆಗಳಿಂದ ಚುನಾವಣೆ ನಡೆಯಬೇಕಾಗಿದೆ. ಅವರ ಅಧಿಕಾರ ಅವತ್ತಿಗೆ ಮುಗಿಯುತ್ತದೆ, ಆದುದರಿಂದ ಆ ಸ್ಥಾನಗಳಿಗೆ ಗ್ರ್ಯಾಜ್ಯುಯೆಟ್ಸ್ ಕಾನ್ಸಿಟಿಟ್ಯೂಯೆನ್ಸಿನಿಂದ ಉಪಾಧ್ಯಾಯರುಗಳ ಕ್ಷೇತ್ರದಿಂದ ಮತ್ತು ವಿಧಾನ ಸಭಾ ಕ್ಷೇತ್ರದಿಂದ ಸದಸ್ಯರುಗಳನ್ನು ಆರಿಸಬೇಕಾಗಿದೆ. ಆ ರೀತಿ ಆರಿಸುವಾಗ ತಾಲ್ಲೂಕ್ ಬೋರ್ಡ್, ಟೌನ್ ಪಂಚಾಯಿತಿ ಸದಸ್ಯರು ಮತ್ತು ಕಾರ್ಪೊರೇಷನ್ ಸದಸ್ಯರುಗಳೇ ಓಟ್ ಹಾಕಬೇಕಾಗುತ್ತದೆ. ಈಗ ಅದಕ್ಕೆ ಚುನಾವಣೆಗಳನ್ನು ನಡಸಿದರೆ ಪುನಃ ವಿರೋಧ ಪಕ್ಷದವರೇ ಹೆಚ್ಚಿನ ಸ್ಥಾನದಲ್ಲಿ ಆರಿಸಿ ಬರುತ್ತಾರೆ ಸರ್ಕಾರದ ಪಕ್ಷಕ್ಕೆ ಕಡಿಮೆ ಸಂಖ್ಯೆಯಲ್ಲಿ ಜನ ಆರಿಸಿ ಬರುತ್ತಾರೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತಿದೆ. ಇದನ್ನು ಹೇಳುವಾಗ ನಾನು ಅಂಕಿ ಅಂಶಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ಕಾರ್ಪೊರೇಷನ್ ಎಲೆಕ್ಷನ್ ಮುಂದಕ್ಕೆ ಹಾಕಿದಿರಿ ಅದಕ್ಕೆ ಕಾರಣ ಬೆಂಗಳೂರು ಕ್ಷೇತ್ರದಲ್ಲಿ ವಿರೋಧ ಪಕ್ಷದವರೇ ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ, ಅದೇ ರೀತಿ ಹುಬ್ಬಳ್ಳಿ–ಧಾರವಾಡ ಕಾರ್ಪೊರೇಷನ್ ಏರಿಯಾದಲ್ಲಿ, ಮೈಸೂರು ನಗರದಲ್ಲಿ ಮತ್ತು ಬೆಳಗಾಂನಲ್ಲಿ ಈ ರೀತಿಯಾಗಿ ವಿರೋಧ ಪಕ್ಷದವರೇ ಆರಿಸಿ ಬಂದಿರುವುದರಿಂದ ಅರ್ಬನ್ ಏರಿಯಾದಲ್ಲಿ ಮಾತ್ರ ನಿಮಗೆ ಬೆಂಬಲವಿದೆ, ಆದುದರಿಂದ ಈಗ ಚುನಾವಣೆಯನ್ನು ಮಾಡಿದರೆ ಹೆಚ್ಚಿನ ಸಂಖ್ಯೆಯಲ್ಲಿ ವಿರೋಧ ಪಕ್ಷದವರೇ ವಿಧಾನ ಪರಿಷತ್ತಿಗೆ ಆರಿಸಿ ಬಂದು ಬಿಡುತ್ತಾರೆ ಎನ್ನುವ ಅಭಿಪ್ರಾಯದಿಂದಲೇ ಸರ್ಕಾರದವರು ಈ ನಿರ್ಣಯವನ್ನು ತೆಗೆದು ಕೊಂಡು ಬಂದಿದ್ದಾರೆ.

ಈಗ ಸರ್ಕಾರದವರು ಕೊಡತಕ್ಕ ಕಾರಣವೇನು ಎಂದರೆ ಸಿಂಬಲ್ ಕೊಡತಕ್ಕ ವಿಚಾರದಲ್ಲಿ ಅನೇಕ ರಿಟ್‌ಗಳು ಹೈಕೋರ್ಟಿನಲ್ಲಿ ಇವೆ ಆ ಕಾರಣಕ್ಕಾಗಿ ನಾವು ಚುನಾವಣೆ ಮುಂದಕ್ಕೆ ಹಾಕುತ್ತಿದ್ದೇವೆಂದು. ಅದಕ್ಕೆ ನಾವು ಹೈಕೋರ್ಟಿಗೆ ಹೋಗಿ ವಿಚಾರಣೆ ಮಾಡಿದಾಗ ಕೇವಲ ೬ ರಿಟ್‌ಗಳು ಮಾತ್ರ ಫೈಲ್ ಆಗಿರುವುದು ತಿಳಿದು ಬಂತು. ಇವತ್ತು ಯಾವುದೇ ಚುನಾವಣೆಗಳಾದರೂ ರಿಟ್ ಆಗೇ ಆಗುತ್ತದೆ. ಮೆನಿ ರಿಟ್ಸ್ ಎಂದರೆ ಎಷ್ಟು? ಮೆನಿ ರಿಟ್ಸ್ ಕೋರ್ಟಿನಲ್ಲಿ ಇರುವುದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳುತ್ತಿದ್ದಾರೆ. ಸಿಂಬಲ್ ಅಲಾಟ್‌ಮೆಂಟ್ ವಿಚಾರದಲ್ಲಿ ಸರ್ಕಾರದ ಉದ್ದೇಶ ನಿಜವಾಗಿಯೂ ಗೊಂದಲವನ್ನು ಎಬ್ಬಿಸಿದೆ. ಸಿಂಬಲ್ ಕೊಡುವ ಒಂದೇ ಕಾರಣದ ಮೇಲೆ ಚುನಾವಣೆಯನ್ನು ಮುಂದಕ್ಕೆ ಹಾಕಿದ್ದಾರೆ. ಇದನ್ನು ಮುಂಚೆಯೇ ನಿರ್ಣಯಿಸಿದ್ದರೆ ಇದರಿಂದ ಅಭ್ಯರ್ಥಿಗಳಿಗೆ

ಅಪಾರವಾದ ಹಣವನ್ನು ಖರ್ಚು ಮಾಡುವುದು, ಪ್ರಚಾರ ಮಾಡುವುದು ತಪ್ಪುತ್ತಿತ್ತು. ಇದರಿಂದ ೨೫ರ ವರೆಗೆ ಕಾದಿದ್ದು ಟೌನ್ ಮುನಿಸಿಪಲ್ ರಿಜಲ್ಟ್ ನೋಡಿದ್ದಾದ ಮೇಲೆ ಈ ನಿರ್ಣಯವನ್ನು ಮಾಡಿದ್ದಾರೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಇವತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಉಳ್ಳವರಾದರೆ ಸದವಕಾಶವನ್ನು ಕೊಡತಕ್ಕದ್ದು ಸರ್ಕಾರದ ಕರ್ತವ್ಯ. ಈ ಚುನಾವಣೆಗಳನ್ನು ಮಾಡದಿದ್ದರೆ, ಸ್ಥಾನೀಕ ಕ್ಷೇತ್ರಗಳಿಂದ ಆರಿಸಿ ಬರತಕ್ಕಂಥ ಜನಗಳ ಹಕ್ಕಿಗೆ ಚ್ಯುತಿ ಬಂದಂತೆ ಆಗುವುದಿಲ್ಲವೆ? ಎಂದು ಸರ್ಕಾರಕ್ಕೆ ಕೇಳಿ ಚುನಾವಣೆಗಳನ್ನು ತಾವು ಮಾಡಬೇಕು. ಹೈಕೋರ್ಟಿನ ನಿರ್ಣಯಕ್ಕೆ ತಾವು ದಾರಿ ಕಾಯುವ ಅವಶ್ಯಕತೆ ಇಲ್ಲ. ರಿಟ್ ಹೋಗುವವರು ಹೋಗಿಯೇ ಹೋಗುತ್ತಾರೆ ತಾವು ಈ ನಿರ್ಣಯ ಮಾಡಿದ ಮೇಲೆ ಸುಮಾರು ೬೦ ರಿಟ್‌ಗಳು ಕೋರ್ಟಿಗೆ ಹೋಗಿವೆ. ಯಾವುದನ್ನು ಚಾಲೆಂಜ್ ಮಾಡಬೇಕೋ ಅದನ್ನು ಚಾಲೆಂಜ್ ಮಾಡುವುದಕ್ಕೆ ಕೋರ್ಟಿಗೆ ಹೋಗುವುದಕ್ಕೆ ಹಕ್ಕು ಅವರಿಗಿರುವುದರಿಂದ ಅವರು ಹೋಗಿಯೇ ಹೋಗುತ್ತಾರೆ. ಅದಕ್ಕಾಗಿ ಸರ್ಕಾರದವರು ಈ ರೀತಿ ಆಲೋಚನೆ ಮಾಡುವುದು ಅನಾವಶ್ಯಕವೆಂದು ನನ್ನ ಭಾವನೆ ಇದೆ.

5-00 ಪಿ. ಎಂ.

ಅದಕ್ಕೆ ಏನೋ ಒಂದು ಕುಂಟು ನೆಪ ಒಡ್ಡುವುದು ಸರಿಯಲ್ಲ. ಹೈಕೋರ್ಟಿನಲ್ಲಿ ರಿಟ್‌ಗಳು ಇವೆ ಅದರಿಂದ ಚುನಾವಣೆಯನ್ನು ಮುಂದಕ್ಕೆ ಹಾಕುತ್ತೇವೆಂದು ಹೇಳುವುದು ಸರಿಯಲ್ಲ, ಸರ್ಕಾರದವರು ಏನು ಒಂದು ನೋಟಿಫಿಕೇಷನ್ ಹೊರಡಿಸಿದ್ದಾರೆ ಅದನ್ನು ಚಾಲೆಂಜ್ ಮಾಡಿ ಸುಮಾರು ೫೦-೬೦ ರಿಟ್‌ಗಳನ್ನು ಹಾಕಿದ್ದಾರೆ. ಚುನಾವಣೆಯ ಸಂಕೇತದ ಬಗ್ಗೆ ಹೈಕೋರ್ಟಿನಲ್ಲಿ ಕೇವಲ ೫-೬ ರಿಟ್‌ಗಳು ಇವೆ. ಆದರೆ ಸರ್ಕಾರದವರು ಹೇಳುವುದು ಬೇಕಾದಷ್ಟು ರಿಟ್‌ಗಳು ಹೈಕೋರ್ಟಿನಲ್ಲಿರುವುದರಿಂದ ಮುನಿಸಿಪಾಲಿಟಿ ಹಾಗೂ ಟೌನ್ ಪಂಚಾಯತ್ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆಂದು ಹೇಳುವುದು ಖಂಡಿತವಾಗಿಯೂ ಇದು ಸರಿಯಲ್ಲ. ಇನ್ನು ಕೆಲವು ಸಂದರ್ಭದಲ್ಲಿ ಹೇಳುತ್ತಾರೆ ಚುನಾವಣೆ ನಡೆಸುವುದು ನಮ್ಮ ಕೆಲಸವಲ್ಲ ಅದನ್ನು ಎಲೆಕ್ಷನ್ ಕಮಿಷನ್ ಎಂದು. ಆದರೆ ಅದು ಸ್ಟ್ಯಾಚ್ಯುಟರಿ ಬಾಡಿ ಚುನಾವಣೆಯ ವ್ಯವಸ್ಥೆ ಮಾಡತಕ್ಕಂಥಾದ್ದು ಅವರಿಗೆ ಸೇರಿದ್ದು ನಾವು ಕೂಡ ಒಪ್ಪುತ್ತೇವೆ. ಆದರೆ ಸರ್ಕಾರದವರು ಚುನಾವಣೆ ಮಾಡುವುದು ನಮ್ಮ ವ್ಯಾಪ್ತಿಗೆ ಸಂಬಂಧಪಟ್ಟದ್ದಲ್ಲವೆಂದು ಹೇಳಬಹುದು. ಇದು ಸರಿಯಾದುದಲ್ಲ. ಆದರೆ ಇದರ ಪರಿಣಾಮ ಏನು ಇದೆ ಎಂದು ಅರ್ಥಮಾಡಿಕೊಳ್ಳಬೇಕು. ಚುನಾವಣೆ ಮಾಡುವುದಕ್ಕೆ ಯಾವ ರೀತಿಯಿಂದಲೂ ಅಡ್ಡಿ ಇಲ್ಲ. ಉದಾಹರಣೆಗೆ ತುರ್ತುಪರಿಸ್ಥಿತಿಯಲ್ಲೇ ಎಷ್ಟೋ ಚುನಾವಣೆಗಳು ನಡೆದಿವೆ ತಾಲ್ಲೋಕು ಬೋರ್ಡುಗಳಿಗೂ ನಡೆದಿವೆ. ಅದು ನಮಗೆ ಗೊತ್ತಿದೆ. ಆದ್ದರಿಂದ ಇವತ್ತು ಸ್ಥಾನಿಕ ಸಂಸ್ಥೆಗಳ ಉಮೇದುವಾರರು ಅವರ ಅರ್ಜಿಗಳನ್ನು ಸಲ್ಲಿಸಿದ್ದರು. ಆದ್ದರಿಂದ ಕೂಡಲೇ ಚುನಾವಣೆಗಳನ್ನು ಮಾಡಬೇಕು. ಕೆಲವು ಕಡೆ ಪಂಚಾಯತ್ ಚುನಾವಣೆಗಳನ್ನು ಮಾಡುತ್ತಾ ಇದ್ದೀರಿ? ನಾಮಿನೇಷನ್ ಎಲ್ಲಾ ಕೊಟ್ಟು ಆದಮೇಲೆ ಸರ್ಕಾರದ ನಿರ್ಣಯ ಕೆಲವು ಜಿಲ್ಲೆಗಳಲ್ಲಿ ಮಾತ್ರ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೀರಿ ಇದು ಸರಿಯಲ್ಲ. ಇದು ಸಾರ್ವಜನಿಕರಿಗೂ ಸಂಬಂಧಪಟ್ಟಿದ್ದು. ಅವರು ಅವರ ಪ್ರತಿನಿಧಿಗಳನ್ನು ಆರಿಸತಕ್ಕಂಥಾದ್ದು ಇದೆ. ಈ ಸರ್ಕಾರ ಒಂದು ಸಾರಿ ಚುನಾವಣೆ ಮಾಡುತ್ತೇವೆಂದು ಹೇಳುತ್ತೀರಿ, ಮತ್ತೊಂದು ಸಾರಿ ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದೇವೆಂದು ತೀರ್ಮಾನ ಮಾಡುತ್ತೀರಿ. ಪ್ರಜಾಪ್ರಭುತ್ವದಲ್ಲಿ ಇದು ವಿರುದ್ಧವಾದದ್ದು. ಒಂದು ಮಾತಿನಲ್ಲಿ ಹೇಳಬೇಕು ಎಂದರೆ ಇದೆಲ್ಲಾ ನಾವು ನೋಡಿದರೆ ಮಹಮದ್ ಬಿನ್ ತೊಗಲಕ್ ಕಾಲದಲ್ಲಿ ಏನು ರಾಜ್ಯಭಾರ ನಡೆಯುತಿತ್ತೋ ಅದು ಜ್ಞಾಪಕಕ್ಕೆ ಬರುತ್ತದೆ. ಈ ರೀತಿ ಪ್ರಜಾಪ್ರಭುತ್ವ ಸಂಪ್ರದಾಯದಲ್ಲಿ ನಡೆಯಕೂಡದೆಂದು ಹೇಳುತ್ತೇನೆ. ಈ ರೀತಿ ಸರ್ಕಾರದವರು ಹುಡುಗಾಟಿಕೆ ರೀತಿಯಲ್ಲಿ ನಡೆದುಕೊಳ್ಳುವುದು ಸರ್ಕಾರಕ್ಕೆ ಗೌರವ ತರುವಂತಾದ್ದಲ್ಲವೆಂದು ಹೇಳಬೇಕಾಗುತ್ತದೆ. ಇದರ ಬಗ್ಗೆ ವಿವರವಾದ ಚರ್ಚೆ ಮಾಡಬೇಕಾಗುತ್ತದೆ. ಇವತ್ತು ಸರ್ಕಾರ ಒಂದು ನಿರ್ದಿಷ್ಟವಾದ ಅಭಿಪ್ರಾಯವನ್ನು ತಿಳಿಸಬೇಕು. ಪ್ರಜಾಪ್ರಭುತ್ವದ ರೀತಿನೀತಿಗಳನ್ನು ಬಿಟ್ಟು ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ಸರಿಯಲ್ಲ. ಆದ್ದರಿಂದ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಈ ವಿಚಾರವನ್ನು ಒತ್ತಾಯಪೂರ್ವಕವಾಗಿ ಹೇಳಿ ಇದಕ್ಕೆ ತಾವು ನಿಲುವಳಿ ಸೂಚನೆಯನ್ನು ಮಂಡಿಸುವುದಕ್ಕೆ ಅಪ್ಪಣೆ ಕೊಡಬೇಕೆಂದು, ಜೊತೆಗೆ ಈ ಮನೆಯ ಕಾರ್ಯಕಲಾಪಗಳನ್ನು ಮುಂದಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ (ವಿಠಲ).— ಮಾನ್ಯ ಅಧ್ಯಕ್ಷರೇ, ಈ ಸದನದ ಕಾರ್ಯಕಲಾಪ ಪ್ರಾರಂಭವಾಗುವ ಮುನ್ನ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದಿನ ಸದನ ನಡೆಯು

ವಾಗಲೇ ನಮ್ಮ ಮಹದೇವ ಟೆಕ್ಸ್‌ಟೈಲ್ ಹಾಗೂ ಶಂಕರ್ ಟೆಕ್ಸ್‌ಟೈಲ್ ಗಿರಿಣಿಗಳನ್ನು ಮುಚ್ಚಿರುವ ಬಗ್ಗೆ ಈ ಸದನದಲ್ಲಿ ಚರ್ಚೆ ನಡೆದು ಸರ್ಕಾರದವತಿಯಿಂದ ಆಶ್ವಾಸನೆ ದೊರಕಿತು. ಆದರೆ ಇಲ್ಲಿಯ ವರೆಗೂ ಅದು ಕಾರ್ಯಗತವಾಗದೆ ಇರುವುದರಿಂದ ಆ ಗಿರಿಣಿಯ ಕೆಲಸಗಾರರು ಅವರ ಕಷ್ಟಗಳನ್ನು ಹೇಳಿಕೊಳ್ಳಲಿಕ್ಕೆ ಬಂದಿದ್ದಾರೆ. ಅವರನ್ನು ಪೋಲೀಸಿನವರು ಅರೆಸ್ಟ್ ಮಾಡಿ ಜೈಲಿನಲ್ಲಿ ಹಾಕಿದ್ದಾರೆ ಹಾಗೂ ಹೆಣ್ಣುಮಕ್ಕಳ ಮೇಲೆ ಕೈಮಾಡಿದ್ದಾರೆ ಆದ್ದರಿಂದ ಇದರ ಬಗ್ಗೆ ವಿವರನ್ನು ತಿಳಿಸಲು ಸ್ವಲ್ಪ ಕಾಲಾವಕಾಶ ಕೊಡಬೇಕೆಂದು ಮತ್ತು ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.— ಇದರ ಬಗ್ಗೆ ತಾವು ನೋಟೀಸ್ ಕೊಟ್ಟಿದ್ದೀರಿ. ಅದನ್ನು ಪರಿಶೀಲನೆ ಮಾಡಿ ಸರ್ಕಾರಕ್ಕೆ ಕಳುಹಿಸುತ್ತೇನೆ......

† ಶ್ರೀ ಪಂಪಾಪತಿ (ದಾವಣಗೆರೆ).—ಗಿರಿಣಿಯನ್ನು ಮುಚ್ಚಿ ಎರಡು ವರ್ಷಗಳಾಯಿತು ಇದನ್ನೇ ನಾವು ಇಲ್ಲಿ ಮಾತನಾಡುತ್ತಾ ಕುಳಿತರೆ ಕೂಲಿಗಾರರ ಜೀವ ಹೋಗುತ್ತದೆ. ಇದರಿಂದ ಏನು ಉಪ ಯೋಗವಾಗುವುದಿಲ್ಲ. ನಾವು ಈ ಸದನದಲ್ಲಿ ವಿಚಾರದನ್ನು ಚೆನ್ನಾಗಿ ತಿಳಿದುಕೊಂಡಿದ್ದೇವೆ, ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಏನು ಹೇಳುತ್ತಾರೆ ಈಗಲೇ ಅವರು ಹೇಳಬೇಕು ಇಲ್ಲದೆಹೋದರೆ ಇದನ್ನು ಚರ್ಚೆ ಮಾಡುವುದರಿಂದ ಏನು ಪ್ರಯೋಜನವಾಗುವುದಿಲ್ಲ......

MR. SPEAKER.--No, No, this is not the way. I have not permitted the hon'ble Member to speak. He may Please resume his seat.

(The hon'ble member Sri Pampapathy persisted in speaking)***

I order for not recording any thing. Whatever he says will not be recorded. Without my permission he should not stand up and speak. It is very very unfair on the part of the member to behave like this. Only with the Speaker's permission a member should speak. Without being called up on to speak if an hon'ble Member begins to speak, can this House function? I want to know from the hon'ble members whether the House can function if the members do like that. Also, when the Chair is standing an hon'ble Member cannot get up and speak.

ಶ್ರೀ ಬಿ. ಭಾಸ್ಕರ್‌ಶೆಟ್ಟಿ.—ಮಾನ್ಯ ಸದಸ್ಯರು ಬಹಳ ಉದ್ವೇಗದಿಂದ ಮಾತನಾಡುವುದರಿಂದ ನಮಗೆ ಏನೂ ಗೊತ್ತಾಗುವುದಿಲ್ಲ. ಅವರು ಯಾವುದಾದರೂ ವಿಚಾರವನ್ನು ತಿಳಿಸಬೇಕಾದರೆ ಸಮಾಧಾನದಿಂದ ಮಾತನಾಡಿದರೆ ಇಲ್ಲಿ ಎಲ್ಲರಿಗೂ ವಿಚಾರ ಗೊತ್ತಾಗುತ್ತದೆ,

ಶ್ರೀ ಜೆ.ಹೆಚ್. ಪಟೇಲ್.—ಈ ಸಭೆಯ ನಿಯಮದ ಪ್ರಕಾರ ಮಾತನಾಡಬೇಕೆಂದು ತಾವು ಅಪ್ಪಣೆ ಕೊಟ್ಟಿದ್ದೀರಿ. ನಿಯಮ ಮೀರಿ ಯಾವ ಮಾನ್ಯ ಸದಸ್ಯರೂ ಮಾತನಾಡಬಾರದು, ಅದನ್ನು ನಾನು ಒಪ್ಪುತ್ತೇನೆ. ಸನ್ಮಾನ್ಯ ಸದಸ್ಯರಾದ ಕಕ್ಕಿಲಾಯರವರು ಮತ್ತು ಶ್ರೀ ಪಂಪಾಪತಿಯವರು ಪ್ರಸ್ತಾಪ ಮಾಡಿರತಕ್ಕಂಥ ವಿಷಯ ಬಹಳ ದಿವಸಗಳಿಂದಲೂ ಸರ್ಕಾರದ ಗಮನಕ್ಕೆ ಬಂದಿದೆ.

ಅಧ್ಯಕ್ಷರು.—ಮಾನ್ಯ ಪಟೇಲ್‌ರವರೆ ಅದು ಯಾವ ಸಮಯದಲ್ಲಿ ಬರಬೇಕು? The hon'ble Leader of the Opposition was attempting to convince the Chair to get the consent for his Adjournment Motion. Then Mr. Kakkilaya, a Senior Member of the House spoke about this matter. Then the Hon'ble labour Leader Sri Pampapathi who is a Member of this House got up and started speaking. It it within the rules ?

ಶ್ರೀ ಜೆ.ಹೆಚ್. ಪಟೇಲ್.—ಅವರು ತಮ್ಮ ಅನುಮತಿಯನ್ನು ಕೇಳಿದರು, ಏಕೆಂದರೆ ಈ ವಿಷಯ ಬಹಳ ಗಂಭೀರವಾದ ವಿಷಯವೆಂದು ಹೇಳಿದ್ದಾರೆ.

***Matter not recorded as ordered by the chair,

ಅಧ್ಯಕ್ಷರು.—ಈ ಬಗ್ಗೆ ವಿಷಯ ತರಿಸುವುದರೊಳಗೆ ಆತುರಪಟ್ಟರೆ ಹೇಗಾಗುತ್ತದೆ ?

ಶ್ರೀ ಜೆ. ಹೆಚ್. ಪಟೇಲ್.—ತಾವು ಏನು ಹೇಳುತ್ತೀರೋ ಹಾಗೆ ನಾವು ಕೇಳುತ್ತೇವೆ. ಆದರೆ ಸರ್ಕಾರ ನಡೆಸತಕ್ಕಂಥವರ ಜವಾಬ್ದಾರಿ ಏನಿದೆ ಅದನ್ನು ಅವರು ಮಾಡಬೇಕು. ಮಿಲ್‌ಗಳಲ್ಲಿ ೬ ತಿಂಗಳಿನಿಂದ ಕೆಲಸ ಬಂದ್ ಆಗಿ ಸಾವಿರಾರು ಜನರು ಅನ್ನವಿಲ್ಲದೇ ಸಾಯುತ್ತಿದ್ದಾರೆ. ಅದರ ಬಗ್ಗೆ ಸರ್ಕಾರಕ್ಕೆ ಪ್ರಜ್ಞೆ ಬೇಡವೇ? ಕಾರ್ಮಿಕರ ಬಗ್ಗೆ ನಾವು ಯಾವ ನೋವಿನಿಂದ ಹೇಳುತ್ತಿದ್ದೇವೆ, ಅದನ್ನು ಅವರು ತೀವ್ರವಾಗಿ ನೋಡಬೇಕು. ಅವರ ಕಷ್ಟವನ್ನು ಪರಿಹಾರ ಮಾಡಬೇಕು. ಬರೀ ಲೆಟರ್ ಫಾಲೋ ಮಾಡುವುದರಿಂದ ಏನೂ ಆಗುವುದಿಲ್ಲ,

Mr. SPEAKER.--We have to follow the rules, which have been approved by this Hon'ble House.

ಶ್ರೀ ಜೆ.ಹೆಚ್. ಪಟೇಲ್.—ತಾವು ಹೇಳಿದಹಾಗೆ ನಾವು ಕೇಳುತ್ತೇವೆ; ಆದರೆ ಅವರು ಕೇಳುವುದಿಲ್ಲ. ಆದ್ದರಿಂದ ಇಲ್ಲಿ ಫ್ರಿಕ್ಷನ್ ಯಾವಾಗ ಆಗುತ್ತದೆ ಎಂದರೆ, ತಾವು ಆರ್ಡರ್ ಮಾಡಿದಾಗ ನಾವು ಅದನ್ನು ಪಾಲಿಸುತ್ತೇವೆ; ಆದರೆ ಜವಾಬ್ದಾರಿಯಿಂದ ಎಲ್ಲವನ್ನೂ ನಿಭಾಯಿಸಿಕೊಂಡು ಹೋಗಬೇಕಾದಂಥವರು ಅದನ್ನು ಪಾಲಿಸುವುದಿಲ್ಲ, ಜನರಿಗೆ ತೊಂದರೆಯಾಗುತ್ತಿರುವುದನ್ನು ನೋಡಿ ನಗುತ್ತಾ ಕುಳಿತಿರುತ್ತಾರೆ, ಆಗ ಘರ್ಷಣೆ ಉಂಟಾಗುತ್ತದೆ.

ಶ್ರೀ ಕೆ.ಎಚ್. ರಂಗನಾಥ್.—ನಾವು ಜನರಿಗೆ ತೊಂದರೆಯಾಗುತ್ತಿರುವುದನ್ನು ನೋಡಿ ನಗುತ್ತಾ ಕುಳಿತಿಲ್ಲ. ಮಾನ್ಯ ಸದಸ್ಯರು ಈ ಬಗ್ಗೆ ಏನು ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಕೇಳಿದ್ದೇನೆ. ಅವರು ಏನು ನೋಟೀಸ್ ಕೊಟ್ಟಿದ್ದೇನೆಂದು ಹೇಳಿದ್ದಾರೆ ಅದು ನನಗೆ ಬಂದಿಲ್ಲ. ಮಾನ್ಯ ಸದಸ್ಯರಾದ ಕಕ್ಕಿಲಾಯವರು ಈ ಬಗ್ಗೆ ಅನೇಕ ಜನರನ್ನು ಅರೆಸ್ಟ್ ಮಾಡಿದ್ದಾರೆ ಎಂಬುದಾಗಿ ಪ್ರಸ್ತಾಪ ಮಾಡಿದ್ದಾರೆ. ಇದು ಹೋಮ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ವಿಚಾರದಿಂದ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಅಧ್ಯಕ್ಷರ ಅಪ್ಪಣೆ ಕೇಳಿಕೊಂಡು ಹೋದರು. ಇವತ್ತು ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರೂ ಇಲ್ಲಿ ಇಲ್ಲ. ಕಾರಣಾಂತರಗಳಿಂದ ಮಾನ್ಯ ಲೇಬರ್ ಮಿನಿಸ್ಟರೂ ಇಲ್ಲಿ ಇಲ್ಲ. ತಮಗೆ ಗೊತ್ತಿದೆ ಅವರ ಮಗ ದೈವಾದೀನರಾಗಿದ್ದಾರೆ. ಅವರು ಈ ದಿನ ಸಭೆಗೆ ಬರುವುದಕ್ಕೆ ಆಗುವುದಿಲ್ಲವೆಂದು ಪತ್ರ ಬರೆದಿದ್ದಾರೆ. ಇಂತಹ ಒಂದು ವಾತಾವರಣದಲ್ಲಿ ನಾವಿರುವುದರಿಂದ ತಕ್ಷಣದಲ್ಲಿ ಬಂದಂತಹ ನೋಟೀಸಿಗೆ ಏನು ಹೇಳಬೇಕೆಂಬುದಕ್ಕೆ ಕಾಲಾವಕಾಶಬೇಕು. ಈ ಒಂದು ಪರಿಸ್ಥಿತಿಗಾಗಿ ನಾನೂ ಕೂಡ ವಿಷಾದಪಡುತ್ತೇನೆ. ಪೋಲೀಸರು ಈ ವಿಷಯದಲ್ಲಿ ಅಚಾತುರ್ಯ ಮಾಡಿದ್ದರೆ, ಹೆಣ್ಣು ಮಕ್ಕಳನ್ನು ಬಂಧಿಸುವುದರಲ್ಲಿ ತೊಂದರೆ ಮಾಡಿದ್ದರೆ ಅವೆಲ್ಲವನ್ನೂ ವಿಚಾರಿಸಿ ನಾಳೆ ಈ ಸಭೆಯ ಗಮನಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ. ಅಲ್ಲಿಯವರೆಗೆ ತಾವು ಶಾಂತಿಯಿಂದ ಇರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಹೆಚ್ಚು ಮಾತನಾಡಿದರೆ ಈ ಸಮಸ್ಯೆಗೆ ಪರಿಹಾರ ಸಿಕ್ಕಿದಹಾಗೆ ಆಗುವುದಿಲ್ಲ, ಮಾನ್ಯ ಇಂಡಸ್ಟ್ರೀಸ್ ಮಿನಿಸ್ಟರ್ ಇಲ್ಲಿ ಇದ್ದಿದ್ದರೆ, ಅವರಿಗೆ ಯಾವ ರೀತಿಯಲ್ಲಾದರೂ ಸಹಾಯ ಮಾಡುವುದಕ್ಕೆ ಪ್ರಯತ್ನ ಪಡುತ್ತೇವೆ ಎಂದು ಹೇಳುತ್ತಿದ್ದರು. ಆದರೂ ಅವರು ಹಿಂದೆಯೇ ಇದಕ್ಕೆ ಏನಾದರೂ ಪರಿಹಾರವನ್ನು ಒದಗಿಸಬೇಕೆಂಬುದಾಗಿ ಹೇಳಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆ, ಕುತೂಹಲ ಏನಿದೆ, ಕಾರ್ಮಿಕರಿಗೆ ಪರಿಹಾರ ದೊರಕಿಸಬೇಕೆನ್ನುವುದು, ಆ ಕುತೂಹಲ ಸರ್ಕಾರಕ್ಕೂ ಇದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಅವರ ಬಗ್ಗೆ ಇನ್ನೂ ಏನೂ ಕಾರ್ಯಗತವಾಗಲಿಲ್ಲ ಎನ್ನುವುದು ಮಾನ್ಯ ಸದಸ್ಯರ ಆಪಾದನೆಯಾಗಿದೆ. ಮಾನ್ಯ ಸದಸ್ಯರು ನಾಳೆಯವರೆಗೆ ತಡೆದರೆ ಸರ್ಕಾರ ಈ ಬಗ್ಗೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ.

ಅಧ್ಯಕ್ಷರು.—ನಾನು ವಿಧಾನಸೌಧಕ್ಕೆ ಬರತಕ್ಕಂಥ ಕಾಲದಲ್ಲಿ ಅಲ್ಲಿ ಕೆಲವರು ಷೌಟಿಂಗ್ ಮಾಡುತ್ತಿದ್ದುದು ಕೇಳಿದೆ. ಅಲ್ಲಿಗೆ ೫೦ ಅಡ ದೂರದಲ್ಲಿದ್ದಾಗ ನನ್ನ ಕಾರನ್ನು ಅಡ್ಡಗಟ್ಟಿದರು. ನಾನು ಅಲ್ಲಿ ೮ ನಿಮಿಷ ಕಾರನ್ನು ನಿಲ್ಲಿಸಿದ್ದೆ. ಷೌಟಿಂಗ್ ನಡೆಸತಕ್ಕಂಥವರನ್ನು ಪೋಲೀಸರು ವ್ಯಾನಿನಲ್ಲಿ ಕರೆದುಕೊಂಡು ಹೋದದ್ದನ್ನು ನಾನು ಕಣ್ಣಾರೆ ನೋಡಿದೆ. ಅಫಿಷಿಯಲ್ಸ್ ಎಲ್ಲಾ ಅಲ್ಲಲ್ಲೇ ನಿಂತುಕೊಂಡಿದ್ದರು. ಈ ವಿಚಾರದಲ್ಲಿ ರೂಲ್ಸ್ ಪ್ರಕಾರ ನೋಟೀಸ್ ಕೊಟ್ಟಿದ್ದಾರೆಂದು ಈಗ ನನಗೆ ಗೊತ್ತಾಯಿತು. ಅದು ಇನ್ನೂ ನನ್ನ ಸಿಗ್ನೇಚರ್‌ಗೆ ಬಂದಿಲ್ಲ. ಅಷ್ಟರಲ್ಲಿ ಸ್ವಿಚ್ ಹಾಕಿಕೊಂಡು ಮಾತನಾಡಿದರೆ ಈ ಸಭೆ ಕಾರ್ಯ

ನಿರ್ವಹಣೆ ಮಾಡುವುದು ಹೇಗೆ? ಈ ಮಾನ್ಯ ಸಭೆಯ ರೂಲ್ಸ್‌ಗಳ ಬಗ್ಗೆ ಗಮನಕೊಡದೇ ಈ ತರಹ ನಡೆದರೆ ಹೇಗೆ? ಅವರ ಬಗ್ಗೆ ನಮ್ಮ ಅನುಕಂಪ ಇರಬೇಕೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅನುಕಂಪ ಬೇರೆ, ಕಾನೂನು ಬೇರೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳು ಈ ಬಗ್ಗೆ ಒಂದು ಆಶ್ವಾಸನೆಯನ್ನು ಕೊಟ್ಟರೆ ಒಳ್ಳೆಯದು. ಏಕೆಂದರೆ ೨೨ ತಿಂಗಳುಗಳಿಂದ ಆ ಜನರು ಉಪವಾಸ ಇದ್ದಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರನು ನಾನು ಕರೆದಾಗ ಅವರು ಮಾತನಾಡಬೇಕು.

ಶ್ರೀ ಎಚ್.ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಹಳ ನೊಂದಿದ್ದಾರೆ. ಅವರ ನೋವಿಗೆ ಪರಿಹಾರ ಸಿಕ್ಕುತ್ತದೆ. ಈ ತರಹ ಕೂಗಾಟದಿಂದ ಅವರ ನೋವು ಪರಿಹಾರವಾಗುವುದಿಲ್ಲ. ಆವೇಶದಿಂದ ಅವರು ಕೂಗುತ್ತಿದ್ದಾರೆ. ಅವರ ಬಗ್ಗೆ ನಮ್ಮ ಅನುತಾಪ ಇದೆ.

ಶ್ರೀ ಪಂಪಾಪತಿ.—ಕೂಗುತ್ತಿದ್ದಾರೆ ಎಂದರೆ ಏನು ಅರ್ಥ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಕೂಗಿ ಹೇಳುತ್ತಿದ್ದಾರೆ ಎಂದರೆ ಗಟ್ಟಿಯಾಗಿ ಮಾತನಾಡುತ್ತಿದ್ದಾರೆ ಎಂದು ನಾನು ಹೇಳಿದ್ದು. ಈಗ ಮಾನ್ಯ ವಿರೋದಪಕ್ಷದ ನಾಯಕರು ಈ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಂದಿದ್ದಾರೆ. ಈ ನಿಲುವಳಿ ಸೂಚನೆಯನ್ನು ಏತಕ್ಕೋಸ್ಕರ ಮಂಡಿಸಬೇಕು ಎಂಬುದರ ಬಗ್ಗೆ ಪ್ರಸ್ತಾಪ ಮಾಡಿ ತಮ್ಮ ಅಪ್ಪಣೆಯನ್ನು ಕೇಳಿದ್ದಾರೆ. ಈ ವಿಷಯವನು ಈ ಮಧ್ಯೆ ಮಾನ್ಯ ಕಕ್ಕಿಲಾಯರವರು ಎತ್ತಿದರು. ಇದು ಮಾನ್ಯ ವಿರೋಧಪಕ್ಷದ ನಾಯಕರು ತಂದಂಥ ನಿಲುವಳಿ ಸೂಚನೆಗಿಂತಲೂ ಮಹತ್ವಪೂರ್ಣವಾದದ್ದು ಎನ್ನುವುದಾದರೆ ಆ ನಿಲುವಳಿ ಸೂಚನೆಯನ್ನು ಕೈಬಿಟ್ಟು ಈ ವಿಷಯವನ್ನು ಪ್ರಸ್ತಾಪ ಮಾಡಬೇಕೇ ಎನ್ನತಕ್ಕಂಥಾದ್ದು ಮೊದಲನೇ ವಿಚಾರ. ಇನ್ನು ಎರಡನೆಯದು ಎಂದರೆ ಮಾನ್ಯ ವಿರೋದಪಕ್ಷದ ನಾಯಕರು ತಂದಂತಹ ನಿಲುವಳಿ ಸೂಚನೆ ಅತಿ ಮಹತ್ವಪೂರ್ಣವಾದದ್ದು ಎನ್ನುವುದಾದರೆ ಅದಕ್ಕೆ ಮಹತ್ವಕೊಟ್ಟು ಈ ವಿಷಯ ಪ್ರಸ್ತಾಪಕ್ಕೆ ಮೊದಲು, ಅದಕ್ಕೆ ಅವಕಾಶ ಕೊಡಬೇಕು. ಈ ವಿಷಯವನ್ನು ಸರ್ಕಾರಕ್ಕೆ ಕಳಿಸಿ ಸಂಬಂಧಪಟ್ಟ ಮಾಹಿತಿಗಳನ್ನು ತರಿಸಿಕೊಂಡು ಅನಂತರ ಮಾನ್ಯ ಅಧ್ಯಕ್ಷರು ಇದಕ್ಕೆ ಅವಕಾಶ ಕೊಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಾನು ವಿಷಯ ಪ್ರಸ್ತಾಪ ಮಾಡತಕ್ಕಂಥ ಕಾಲದಲ್ಲಿ ಬೇರೆ ವಿಷಯವನ್ನು ಈ ರೀತಿ ವಿಷಯಾಂತರ ಮಾಡಿ ಈ ಸಭೆಯನ್ನು ಬೇರೆ ದಿಕ್ಕಿನಲ್ಲಿ ತೆಗೆದುಕೊಂಡು ಹೋಗ ತಕ್ಕಂಥಾದ್ದು ಈ ಸಭೆಯ ನಿಯಮಕ್ಕೆ ಉಚಿತವಾದದ್ದಲ್ಲ.

SRI C. M. ARUMUGUM.—I would like to make a submission to the Hon'ble Speaker. On the point that has been raised by Mr. Kakkilaya the Hon'ble Speaker was kind enough to say that it can be taken up tomorrow. In the meanwhile. may I make a submission to the Government through the Chair?. Sir, Some of the ladies have come from Davanagere because they have been without jobs for the last two years. Their demonstrations and representations have not so far received any attention by the Government. Therefore, to impress the Government they have come from Davanagere to Bangalore and gathered in f ont of the Vidhana Soudha, because the Assembly is in Session, Probably they thought the Members would draw the attention of the Government to their problem so that Government may take same action.

A yway the Government and the Hon'ble Minister have suggested that they may come before the House tomorrow with such details. In the meantime, I submit that the ladies who have come from far off distance have been arrested by the police this afternoon may be released this evening unconditionally. This is my submission.

ಶ್ರೀ ಯು.ಟಿ. ಬೋರ್ಕರ್.—ಸ್ವಾಮಿ, ಈಗ ಅರೆಸ್ಟ್ ಆಗಿರುವಂತಹ ಜನಗಳಿಗೆ ಭದ್ರತೆ ಕೊಡ ಬೇಕು. ರಾಜ್ಯದಲ್ಲಿ ಬೇರೆ ಬೇರೆ ಕಡೆಗಳಲ್ಲಿ ಪೋಲೀಸರು ಅರೆಸ್ಟ್ ಮಾಡಿದ ಮೇಲೆ ಅವರ ಮೇಲೆ ಕೈ ಮಾಡಿದಂತಹ ಪ್ರಕರಣಗಳು ಆಗಿವೆ.

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಮಾನ್ಯ ಸದಸ್ಯರುಗಳು ರೂಲ್ಸ್‌ಗಳನ್ನು ಸರಿಯಾಗಿ ಓದಿಕೊಂಡು ಬರಬೇಕು. ಅನಾವಶ್ಯಕವಾಗಿ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗಬೇಡಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ರೂಲ್ಸ್ ಪ್ರಕಾರ ಇದು ಸರಿಯೆಂದು ನಾವು ಹೇಳುತ್ತಿಲ್ಲ. ಆದರೆ ಅವರ ಉದ್ವೇಗವನ್ನು ಮಾನ್ಯ ಅಧ್ಯಕ್ಷರು ಅರ್ಥಮಾಡಿಕೊಳ್ಳಬೇಕು. ಸರ್ಕಾರದಿಂದ ಕೊಟ್ಟಂತಹ ಆಶ್ವಾಸನೆಗಳು ಕಾರ್ಯಗತವಾಗದಿದ್ದಾಗ, ಸರ್ಕಾರ ಕಿವುಡಾದಾಗ ಈ ರೀತಿ ಮಾತನಾಡಬೇಕಾಗುತ್ತದೆ. ಮಹದೇವ ಟೆಕ್ಸ್‌ಟೈಲ್ ಮಿಲ್‌ನವರು ಸುಮಾರು 20 ದಿವಸಗಳಿಂದ ಉಪವಾಸ ಮಾಡುತ್ತಿದ್ದಾರೆ. ದಾವಣಗೆರೆಯಿಂದ ಹುಬ್ಬಳ್ಳಿಯಿಂದ ಇಲ್ಲಿಗೆ ಜನ ಬಂದಿದ್ದಾರೆ. ಶೂನ್ಯವೇಳೆಯಲ್ಲಿಯೂ ಕೂಡ ಇಂಥ ವಿಚಾರಗಳನ್ನು ಎತ್ತುವುದಕ್ಕೆ ಅವಕಾಶ ಇದೆ. ನಾವುಗಳು ಈ ಮನೆಗೆ ಬರುವ ಸಂದರ್ಭದಲ್ಲಿ ಏನಾದರೂ ಒಂದು ಘಟನೆ ನಡೆದರೆ ಆ ಘಟನೆ ವಿಷಯವನ್ನು ಈ ಮನೆಯಲ್ಲಿ ಎತ್ತತಕ್ಕ ಅವಕಾಶ ಇದೆ. ಅದಕ್ಕೆ ತಮ್ಮ ಸಮ್ಮತಿ ಬೇಕು.

ಅಧ್ಯಕ್ಷರು.—ಅದರಿಂದ ಏನು ಪ್ರಯೋಜನವಾಗುತ್ತೆ?

ಶ್ರೀ ಎಸ್.ಆರ್. ಬೊಮ್ಮಾಯಿ.—ಪ್ರಯೋಜನ ಆಗುತ್ತೆ. ಅಂಥ ಘಟನೆಗಳನ್ನು ನಿಲ್ಲಿಸಬೇಕಾ ಗುತ್ತದೆ. ಅಂಥ ವಿಚಾರಗಳಿಗೆ ನಾವು ರೂಲ್ಸ್ ಮುಖಾಂತರ ಹೋಗುವುದಕ್ಕೆ ಆಗುವುದಿಲ್ಲ. I request the Government to take steps in the matter and settle the issue raised by the workers.

MR. SPEAKER.—I observed the situation. They were shouting ; they have not allowed the officers to the office.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾಳೆ ದಿವಸದ ಕಾರ್ಯಕ್ರಮದ ಪಟ್ಟಿಯಲ್ಲಿ ಈ ವಿಚಾರ ವನ್ನು ಹಾಕಿ. ಅಲ್ಲಿಯವರೆಗೆ ಕಾರ್ಮಿಕರಿಗೆ ಯಾವರೀತಿಯಾದ ತೊಂದರೆಯಾಗದಂತೆ ವ್ಯವಸ್ಥೆ ಮಾಡ ಬೇಕು. ಸಾಧ್ಯವಾದರೆ ಅವರನ್ನು ಬಿಡುಗಡೆ ಮಾಡುವುದು ಒಳ್ಳೆಯದು.

ಶ್ರೀ ಕೆ. ಹೆಚ್. ರಂಗನಾಥ್.—ಈಗತಾನೇ ಈ ವಿಚಾರ ಗೊತ್ತಾಗಿದೆ. ಇದರ ಬಗ್ಗೆ ವಿಚಾರಿಸು ತ್ತೇನೆ. ಕಾನೂನಿಗೆ ಯಾರಾದರೂ ಮೀರಿ ನಡೆದಿದ್ದರೆ ಸರ್ಕಾರ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತದೆ. ಯಾರನ್ನೂ ಕೂಡ ಕ್ರಮ ತೆಗೆದುಕೊಳ್ಳದೆ ಬಿಡುವುದಿಲ್ಲ.

ಶ್ರೀಮತಿ ಎಸ್. ಪ್ರಮೀಳ.—ರೋಂ ನಗರ ಹತ್ತಿಕೊಂಡು ಉರಿಯುತ್ತಿದ್ದರೆ ಚಕ್ರವರ್ತಿ ಪಿಟೀಲು ಬಾರಿಸುತ್ತಿದ್ದನಂತೆ. ಆ ರೀತಿ ಆಗಬಾರದು. ನರಿ ಕೂಗು ಗಿರಿಗೆ ಮುಟ್ಟುತ್ತದೆಯೇ ? ಪೋಲೀಸಿ ನವರು ಹೆಣ್ಣು ಮಕ್ಕಳನ್ನು ಕೂಡ ಅರೆಸ್ಟ್ ಮಾಡಿದ್ದಾರೆ, ಹೆಣ್ಣು ಮಕ್ಕಳನ್ನು ತಕ್ಷಣ ಬಿಡುತ್ತೇವೆನ್ನುವ ಆಶ್ವಾಸನೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಅಧ್ಯಕ್ಷರು.—ಸರ್ಕಾರದವರು ಈ ವಿಷಯವನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. The Leader of the Opposition wanted certain promise in the matter for taking up this matter tomorrow and the Minister assured for taking up this matter tomorrow. Therefore, let us close this matter now.

ಶ್ರೀ ಕೆ. ಹೆಚ್. ರಂಗನಾಥ್.—ತೊಂದರೆ ಆಗದ ರೀತಿಯಲ್ಲಿ ಸರ್ಕಾರ ನೋಡಿಕೊಳ್ಳುತ್ತದೆ ಎನ್ನುವ ಮಾತನ್ನು ಹೇಳಿದೆ. ಕಾನೂನಿಗೆ ಮೀರಿ ಏನಾದರೂ ಮಾಡಿದರೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಪಂಪಾಪತಿ.—ಕೆಲಸ ಕೇಳುವುದು ಕಾನೂನಿಗೆ ಮೀರಿದ್ದೆ ?

MR. SPEAKER.—I have not permitted the Honble Member to speak. He may please resume his seat.

SRI K. BHASKAR NAIDU.—The Opposition has vehemently stated that the lady agitators who have been arrested should be released immediately. We also share the views expressed by the Opposition and sympathise with the ladies arrested. We also want to see that they must be released.

ಶ್ರೀ ಸಿ. ಎಂ. ಇಬ್ರಾಹಿಂ.—ಸ್ವಾಮಿ, ಈ ಅಧಿವೇಶನವನ್ನು ಮುಂದಕ್ಕೆ ಹಾಕಿ, ಬಹಳ ಕಾನೂನು ಬದ್ಧವಾಗಿ ಮಾತನಾಡುತ್ತಾರೆ, ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ ಅವರ ಹೇಳಿಕೆ ತೆಗೆದುಕೊಳ್ಳಿ.

MR. SPEAKER.—If the members conduct themselves in this manner it will be difficult for the House to carry on with its business. The public is watching as how we are conducting ourselves in the House. If two or three people stand up at a time and begin to speak, how can I conduct the business ? If any member wants to speak he may raise his hand and I will call his name. Because he is a member, can he disobey the rules ?

SRI C. M. IBRAHIM.—If that is so then the hon. member Sri Bhaskar Nadiu has also disobeyed the rules.

SRI K. BHASKAR NAIDU.—I had your permission, Sir.

MR. SPEAKER.—I have been watching the hon. member Sri Ibrahim. he behaves like that.

5-30 P.M.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಈ ಮನೆಯಲ್ಲಿ ಒಂದು ವಿಷಯ ಚರ್ಚೆ ಆಗುತ್ತಾ ಇದ್ದಂಥ ಕಾಲದಲ್ಲಿ ಬೇರೆ ವಿಷಯ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದು ಉಂಟೆ ? ಆ ತರಹ ನಡೆಯಬಾರದು ಎಂದು ತಾವು ಅಪ್ಪಣೆ ಕೊಟ್ಟರೆ ಅದರಂತೆ ಪಾಲನೆ ಮಾಡಲಿಕ್ಕೆ ಅನುಕೂಲವಾಗುತ್ತದೆ. ತಾವು ಕೊಟ್ಟಂತ ಅಪ್ಪಣೆಯನ್ನು ಯಾವ ಸದಸ್ಯರಾದರೂ ಉಲ್ಲಂಘನೆ ಮಾಡಿದರೆ ಅವರಿಗೆ ಶಿಕ್ಷೆ ಕೊಡಲಿಕ್ಕೂ ಕೂಡ ಅನುಕೂಲವಾಗುತ್ತದೆ.

ಶ್ರೀ ಹೆಚ್. ಗಂಗಾಧರನ್.—ಇಂತಹ ಸಮಸ್ಯೆ ಇದೆ ಎನ್ನುವುದನ್ನು ಸಭೆಯ ಗಮನಕ್ಕೆ ತಂದಿದ್ದೇವೆ ಅಷ್ಟೆ.

ಶ್ರೀ ಬಿ. ವಿ. ಕಕ್ಕಿಲಾಯ.—ಕೆಲವು ಸಂದರ್ಭಗಳಲ್ಲಿ ವಿಚಾರ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ವಿರೋಧಪಕ್ಷದ ನಾಯಕರಾದ ಬೊಮ್ಮಾಯಿಯವರು ನಿಲುವಳಿ ಸೂಚನೆ ಬಗ್ಗೆ ಪೂರ್ವಭಾವಿಯಾಗಿ ವಿವರಣೆ ಮಾಡಿದರು ಅದೇ ಸಂದರ್ಭದಲ್ಲೇ ತಕ್ಷಣ ಬೇರೆ ಒಂದು ವಿಚಾರತಂದು ಇದನ್ನು ಮಾಡಿ ಎಂದು ಹೇಳಿದರೆ ಅದು ಆಗುತ್ತದೆಯೇ ? ಅದನ್ನು ಮಾನ್ಯ ಸದಸ್ಯರಾದ ಕಕ್ಕಿಲಾಯ ಅವರೇ ಹೇಳಬೇಕು.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ವಿರೋಧಪಕ್ಷದ ನಾಯಕರು ಮಾತು ಮುಗಿಸಿ ಕುಳಿತು ಕೊಳ್ಳುವವರೆಗೂ ನಾನು ಸುಮ್ಮನೆ ಇದ್ದೆ. ಅಲ್ಲದೆ ನಾನು ಈ ವಿಚಾರವನ್ನು ಅಧ್ಯಕ್ಷರು ಟೀ ಬ್ರೇಕ್‌ಗೆ ಅಡ್ಜರ್ನ್ ಮಾಡುವ ಮುಂಚೆಯೇ ಈ ಪ್ರಶ್ನೆಯನ್ನು ಹೇಳಬೇಕು ಎಂದು ಇದ್ದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಈ ಮನೆಯ ಕೆಲಸ ಹೇಗೆ ನಡೆಯಬೇಕು ಎನ್ನುವುದನ್ನು ಯೋಚನೆ ಮಾಡಬೇಕು.

ಶ್ರೀ ಕೆ, ಹೆಚ್. ರಂಗನಾಥ್.—ಈಗ ನಮ್ಮ ಹೋಂ ಸೆಕ್ರೆಟರಿಯವರು ಬಂದಿದ್ದರು, ಮಾನ್ಯ ಸದಸ್ಯರು ಹೇಳಿದಂಥ ವಿಚಾರ ಸರಿಯೇ. ತಪ್ಪೇ, ಎಷ್ಟು ಜನರು ಅರೆಸ್ಟ್ ಆಗಿದ್ದಾರೆಂದು ನೋಡಲಿಕ್ಕೆ

ಹೇಳಿದ್ದೇನೆ. ಬಹಳ ಮಟ್ಟಿಗೆ ಅವರು ಈಗಲೇ ಇನ್‌ಫರ್‌ಮೇಷನ್ ತೆಗೆದುಕೊಂಡು ಬಂದು ತಿಳಿಸಿದರೆ, ಅದನ್ನು ನಾನು ಈಗಲೇ ತಿಳಿಸುತ್ತೇನೆ. ಅಂತಹ ಒಂದು ಅಚಾತುರ್ಯ ನಡೆದಿದ್ದರೆ, ಅದನ್ನು ಬಹಳ ಮಟ್ಟಿಗೆ ಸರ್ಕಾರ ಹೆಚ್ಚು ನಿಗಾವಹಿಸಿ ಕ್ರಮ ತೆಗೆದುಕೊಳ್ಳುತ್ತದೆ. ಇದರ ಬಗ್ಗೆ ನಾವು ಪ್ರಸ್ತಾಪ ಮಾಡತಕ್ಕುದ್ದು ಸರಿಯಲ್ಲ. ಮುಂದಿನ ಕಾರ್ಯಕ್ರಮ ತೆಗೆದುಕೊಳ್ಳುವುದು ಒಳ್ಳೆಯದು.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಾಕಷ್ಟು ಎಲ್ಲಾ ವಿಷಯವನ್ನು ಸಂಗ್ರಹಣೆ ಮಾಡಿ ತಿಳಿಸಿ.

ಶ್ರೀ ಕೆ. ಹೆಚ್. ರಂಗನಾಥ್.—ಈಗ ಹೋಂ ಸೆಕ್ರೆಟರಿಯವರಿಗೆ ತಿಳಿಸಿದ್ದೇನೆ. ಇಂಡಸ್ಟ್ರೀಸ್ ಮಿನಿಸ್ಟರ್ ಅವರು ಇಲ್ಲ.

ಅಧ್ಯಕ್ಷರು.—ಅದನ್ನು ನಾಳೆ ಹೇಳಿ.

ಒಬ್ಬ ಸದಸ್ಯರು.—ಈಗ ಅರೆಸ್ಟ್ ಆಗಿರ ವವರಲ್ಲಿ ಮಹಿಳೆಯರನ್ನು ಬಿಡುವುದು ಒಳ್ಳೆಯದು.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ. ಒಂದು ನೋಟೀಸ್‌ಗೆ ಸಹಿ ಮಾಡಿರತಕ್ಕ ಮಾನ್ಯ ಸದಸ್ಯರ ಪರವಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ವಿಷಯ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ತಾವು ಅಪ್ಪಣೆ ಕೊಡಬೇಕಾದ್ದು, ಬಿಡಬೇಕಾದ್ದು ತಮಗೆ ಬಿಟ್ಟದ್ದು. ನನ್ನ ಬಗ್ಗೆ ನಾನು ಸರ್ಕಾರದ ವತಿಯಿಂದ ಹೇಳಬೇಕಾದರೆ, ಜನರಲ್ ಡಿಸ್‌ಕಷನ್ ಪ್ರಾರಂಭವಾಗುವುದರಿಂದ ಸಾಕಷ್ಟು ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಕಾಲಾವಕಾಶ ಇದೆ. ಇದಲ್ಲದೆ, ಡಿಮ್ಯಾಂಡ್ ತೆಗೆದುಕೊಳ್ಳುವಾಗ ಆಗಲೂ ಕೂಡ ಸಾಕಷ್ಟು ಕಾಲಾವಕಾಶ ಇರುತ್ತದೆ. ಈಗ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಎಂದರೆ ನಾಳೆ ಬರತಕ್ಕ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಚುನಾವಣೆಗಳನ್ನು ಮುಂದಕ್ಕೆ ಹಾಕಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ. ಅದು ಸತ್ಯಕ್ಕೆ ಬಹಳ ದೂರವಾದುದು. ಆ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಎಷ್ಟು ಕಾತುರತೆ ಇದೆಯೋ ಅಷ್ಟೇ ಕಾತುರತೆ ಸರ್ಕಾರಕ್ಕೂ ಕೂಡ ಇದೆ. ಈಗ ನಮ್ಮ ಮುನಿಸಿಪಲ್ ಎಲೆಕ್ಷನ್‌ನಲ್ಲಿ ಒಂದೇ ಡಿವಿಜನ್‌ನಲಿ ಪ್ರತಿಯೊಬ್ಬರಿಗೂ ಒಂದೇ ಚಿಹ್ನೆ ಕೊಟ್ಟಿದುದರ ಬಗ್ಗೆ ಹೈಕೋರ್ಟಿನಲಿ ಪ್ರಶ್ನೆ ಬಂದಿದ್ದರಿಂದ, ಅಲ್ಲದೆ ಒಬ್ಬ ವ್ಯಕ್ತಿಗೆ ಯಾರನ್ನು ಚುನಾಯಿಸಬೇಕು ಎನ್ನುವ ತೊಂದರೆ ಬರುವುದು ಸರ್ಕಾರದ ಗಮನಕ್ಕೆ ಬಂದಿದ್ದರಿಂದ ಸರ್ಕಾರ ಅನಿವಾರ್ಯವಾಗಿ, ಈ ಚುನಾವಣೆ ನಡೆಯತಕ್ಕದ್ದನ್ನು ಮುಂದೆ ಹಾಕಿದೆ. ಕ್ಯಾಲೆಂಡರ್ ಆಫ್ ಈವೆಂಟ್ಸ್, ಸ್ಪರ್ಧೆ ಮಾಡಿರತಕ್ಕವರು, ಅವಿರೋಧವಾಗಿ ಚುನಾಯಿತರಾಗಿರುವವರಿಗೆ ಡಿಸ್ಟರ್ಬ್ ಮಾಡಬೇಕು ಎನ್ನತಕ್ಕದ್ದು ಸರ್ಕಾರದ ಉದ್ದೇಶವಲ್ಲ. ಈ ವಿಚಾರವನ್ನು ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಚುನಾವಣೆ ನಡೆಸುವುದರಿಂದ ನಮಗೆ ತೊಂದರೆ ಇದೆ ಎನ್ನುವುದನ್ನು ತಿಳಿಸಿದರು ಆದರೆ ಅದರಲ್ಲಿ ಎಷ್ಟು ಸತ್ಯಾಂಶ ಇದೆ ಎನ್ನುವುದನ್ನು ಅವರೇ ಹೇಳಬೇಕಾಗುತ್ತದೆ. ಅಲ್ಲದೆ ಅವರು ಹೇಗೆ ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಗೆಲ್ಲುತ್ತೇವೆ ಎಂದು ಯಾವ ದೃಷ್ಟಿಯಿಂದ ಹೇಳುತ್ತಾರೋ ಗೊತ್ತಿಲ್ಲ. ನಾವು ಕೂಡ ಎಲ್ಲಾ ಮುನಿಸಿಪಾಲಿಟಿಗಳಲ್ಲೂ ಕೂಡ ಸೋಲುತ್ತೇವೆ ಎಂದು ಹೇಳುವುದಿಲ್ಲ. ಅವರಿಗೆ ಎಷ್ಟು ಅನುಕೂಲ ಇದೆಯೋ ಅದೇ ರೀತಿ ನಮಗೂ ಹೆಚ್ಚಿನ ಅನುಕೂಲ ಇದೆ. ಇವೊತ್ತು ಸರ್ಕಾರ ಆದಷ್ಟು ಜಾಗ್ರತೆ ಚುನಾವಣೆ ಮಾಡಬೇಕು ಎಂದು ವಿಚಾರ ಮಾಡಿದೆ ಕೋರ್ಟ್ ತೀರ್ಮಾನ ಬಂದ ತಕ್ಷಣ ಕೂಡಲೇ ಸರ್ಕಾರದ ತೀರ್ಮಾನವನ್ನು ತೆಗೆದುಕೊಳ್ಳಬೇಕು ಎನ್ನುವ ವಿಚಾರ ಕೂಡ ಇದೆ. ಈಗ ಹೈಕೋರ್ಟ್ ಮುಂದೆ ವಿಚಾರ ಏನು ಇದೆ ಆ ಬಗ್ಗೆಯೂ ಕೂಡ ಅರ್ಲಿ ಹಿಯರಿಂಗ್‌ಗೆ ಅರ್ಜಿ ಹಾಕಿ ಬೇಗ ತೀರ್ಮಾನ ತೆಗೆದುಕೊಂಡು ಚುನಾವಣೆ ನಡೆಸಬೇಕು ಎಂದು ಸರ್ಕಾರದ ಅಭಿಪ್ರಾಯ ಇದೆ. ಸರ್ಕಾರ ಯಾವುದೇ ಒಂದು ದುರುದ್ದೇಶದಿಂದ ಈ ಚುನಾವಣೆಗಳನ್ನು ಮುಂದೆ ಹಾಕಿದೆ ಎನ್ನುವುದರಲ್ಲಿ ಸತ್ಯಾಂಶ ಇಲ್ಲ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡಲಿಕ್ಕೆ ಜನರಲ್ ಡಿಸ್‌ಕಷನ್ ಸುಮಾರು ೬ ದಿವಸಗಳು ನಡೆಯುತ್ತದೆ. ಇನ್ನು ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಡಿಮ್ಯಾಂಡ್ ಬಂದಾಗ ಆಗಲೂ ಕೂಡ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ. ಈಗ ಪಂಚಾಯಿತಿಗಳ ಬಗ್ಗೆ ಕೂಡ ನೋಟೀಸಿನಲ್ಲಿ ಸೇರಿಸಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಈ ಕಾರ್ಪೊರೇಷನ್ ಚುನಾವಣೆಗಳನ್ನು ಜೂನ್ ತಿಂಗಳ ಕೊನೆಯಲ್ಲಿ ಮಾಡುವುದಾಗಿ ಹೇಳಿದ್ದಿರಿ.

ಶ್ರೀ ಪಿ. ರಾಮದೇವ್.—ಇದು ಸಚಿವರುಗಳ ಮಾಮೂಲಿ ಆಶ್ವಾಸನೆ.

ಶ್ರೀ ಕೆ. ಹೆಚ್. ರಂಗನಾಥ್.—ಇದು ನಮ್ಮ ಮಾಮೂಲಿ ಆಶ್ವಾಸನೆ ಅಲ್ಲ, ಇದು ನಿಮ್ಮ ಮಾಮೂಲಿ ವಾದವಾಗುತ್ತದೆ ಅಷ್ಟೆ. ಯಾವ ಕಾರಣದಿಂದ ಈ ಚುನಾವಣೆಗಳನ್ನು ಮುಂದಕ್ಕೆ ಹಾಕಿದರು ಎಂಬುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅರ್ಥಮಾಡಿಕೊಂಡು ಇದನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ಹೋಗದೆ ಇಲ್ಲಿಗೆ ಕೈ ಬಿಟ್ಟು ಇವತ್ತಿನ ದಿವಸ ಏನು ಕಾರ್ಯಕ್ರಮ ಪ್ರಾರಂಭ ಆಗಬೇಕಾಗಿತ್ತು ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ತಾವು ಈಗ ಎತ್ತಿರುವ ವಿಚಾರದ ಬಗ್ಗೆ ಆಶ್ವಾಸನೆ ಕೊಡುವುದಕ್ಕೆ ಅಷ್ಟೇನೂ ಕಾರಣಗಳಿಲ್ಲವೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಸ್ವಾಮಿ. ಈ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಮಾತ ನಾಡುವುದಕ್ಕೆ ಇಚ್ಛೆ ಪಟ್ಟಿದ್ದಾರೆ. ಅವರ ಇಚ್ಛೆಯನ್ನು ನಾನು ಮೊಟಕು ಮಾಡುವುದಕ್ಕೆ ಇಷ್ಟ ಪಡುವುದಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್.—ಪಾರ್ಟಿ ಸಿಸ್ಟಂನಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆ ಬೇರೆ ಸದಸ್ಯರು ಮಾತನಾಡುವುದಕ್ಕೆ ಅವಕಾಶ ಇರುವುದಿಲ್ಲ. ಅಂಥ ಅವಕಾಶ ಯಾವಾಗ ಬರು ತ್ತದೆ ಎಂದರೆ ಸದಸ್ಯರು ತಾವು ಹೇಳಬೇಕಾದ್ದನ್ನು ವಿರೋಧ ಪಕ್ಷದ ನಾಯಕರ ಹತ್ತಿರ ಹೇಳಿದ್ದನ್ನು ಅವರು ಮಾತನಾಡುವಾಗ ಬಿಟ್ಟಿದ್ದರೆ,ಅಥವಾ ಅವರಿಗಿಂತ ಇನ್ನೂ ಹೆಚ್ಚಿಗೆ ಹೇಳುವುದೇನಾದರೂ ಇದ್ದರೆ ಆಗ ಮಾತ್ರ ಬರುತ್ತದೆ.

ಶ್ರೀ ಎಂ.ಸಿ. ಬಸಪ್ಪ —ನಿಲುವಳಿ ಸೂಚನೆಗೆ ರುಜು ಮಾಡಿದವರು ಮಾತ್ರ ಮಾತನಾಡಬೇಕು, ಬೇರೆಯವರು ಮಾತನಾಡಬಾರದೆಂದು ಏನೂ ಇಲ್ಲ.

ಅಧ್ಯಕ್ಷರು.—ತಾವು ಇದನ್ನು ಅರ್ಥ ಮಾಡಿಕೊಳ್ಳಿ. ಇದಕ್ಕೆ ಇನ್ನೂ ನನ್ನ ಒಪ್ಪಿಗೆಯನ್ನು ಕೊಟ್ಟಿಲ್ಲ. ಹಿಂದಿನಿಂದ ನಡೆದುಕೊಂಡು ಬಂದಿರುವ ಸಂಪ್ರದಾಯದ ಪ್ರಕಾರ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲಿ ಎಂದು ಈ ರೀತಿ ಹೇಳಿದೆ ಅಷ್ಟೆ. ವಿರೋಧ ಪಕ್ಷದ ನಾಯಕರು ತಮ್ಮ ಪಕ್ಷದ ಎಲ್ಲ ಸದಸ್ಯರನ್ನೂ ಪ್ರತಿನಿಧಿಸುತ್ತಾರೆ. ಮಾನ್ಯ ಸದಸ್ಯರು ಈಗ ಎಷ್ಟು ಜನ ಮಾತನಾಡುತ್ತಾರೆ, ಎಷ್ಟು ಹೊತ್ತು ಮಾತನಾಡುತ್ತಾರೆ ಎಂಬುದು ನನಗೆ ಸ್ಪಷ್ಟವಾಗಿ ತಿಳಿದರೆ ಆಗ ನಾವು ಮುಂದಿನ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದರೆ ಇಲ್ಲಿರುವ ಎಲ್ಲ ಸದಸ್ಯರಿಗೂ ಮಾತನಾಡುವುದಕ್ಕೆ ಅವಕಾಶ ಕೊಡುವುದಕಾ ಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ತಮ್ಮ ಅಭಿಪ್ರಾಯವನ್ನು ನಾನು ಒಪ್ಪುವುದಕ್ಕಾಗುವುದಿಲ್ಲ. ತಾವು ಸಭೆಯ ಅಭಿಪ್ರಾಯವನ್ನು ಯಾವಾಗ ಪಡೆಯಬೇಕೆಂದು ಇದೆ, ಅದು ವಿಷಯದ ಗಹನತೆ ಮೇಲೆ ಹೋಗುತ್ತದೆ. ವಿರೋಧ ಪಕ್ಷದ ನಾಯಕರೊಬ್ಬರೇ ಮಾತನಾಡಬೇಕೆಂದು ಹೇಳುವುದಾದರೆ ಅವರೇನೂ ದೊಡ್ಡ ಬೃಹಸ್ಪತಿ ಅಲ್ಲ. ಅವರ ಜೊತೆಗೆ ಮಾನ್ಯ ಸದಸ್ಯರೂ ಮಾತನಾಡುವ ಹಕ್ಕು ಇದೆ. ಈ ವಿಷಯ ತಮಗೂ ಗೊತ್ತಿದೆ. ಮಾನ್ಯ ರಂಗನಾಥ್‌ರವರು ಈ ಕಡೆ ಕೂತಿದ್ದಾಗ ನಿಲುವಳಿ ಸೂಚನೆ ಮೇಲೆ ಎಷ್ಟು ಜನ ಮಾತನಾಡಿದ್ದಾರೆ ಎಂಬುದನ್ನು ಹಿಂದಿನ ರೆಕಾರ್ಡ್ ತೆಗೆಸಿ ನೋಡಿ. ಇವತ್ತು ಸರ್ಕಾರಕ್ಕೆ ಒಂದು ಮಾತನ್ನು ನಾನು ಹೇಳುವುದಾದರೆ, ಕಾರ್ಪೊರೇಷನ್ ಚುನಾವಣೆಯನ್ನು ಮಾಡು ವವರೆಗೂ ವಿಧಾನ ಪರಿಷತ್ತಿಗೆ ಚುನಾವಣೆ ಮಾಡುವುದಿಲ್ಲವೆಂದು ತಾವು ನಮಗೆ ಭರವಸೆ ಕೊಡುವುದ ಕ್ಕಾಗುತ್ತದೆಯೇ ? ತಾವು ಹೇಳಬಹುದು, ಈ ಪರಿಷತ್ತಿನ ಚುನಾವಣೆ ನಡೆಸುವುದು ಚುನಾವಣಾ ಆಯೋಗಕ್ಕೆ ಸಂಬಂಧಪಟ್ಟಿದ್ದು, ಇದನ್ನು ನಾವು ಮುಂದೂಡುವುದಕ್ಕಾಗುವುದಿಲ್ಲ ಎಂದು. ಜೂನ್ ೨೧ನೇ ತಾರೀಖು ಕಾರ್ಪೊರೇಷನ್ ಚುನಾವಣೆ ಆಗಿದ್ದರೆ ಏನಾಗುತ್ತಿತ್ತು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ.—ಚುನಾವಣೆ ಆದಮೇಲೂ ಅದು ಹೋಗುತ್ತಿತ್ತು.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಈ ವಿಷಯದ ಗಂಭೀರತೆಯನ್ನು ಅರ್ಥಮಾಡಿಕೊಳ್ಳ ಬೇಕು. ನಮ್ಮ ರಾಜ್ಯದಲ್ಲಿರುವ ೨೧೩ ಮುನಿಸಿಪಾಲಿಟಿಗಳ ಪೈಕಿ ಚುನಾವಣೆ ನಡೆಯಬೇಕಾದುವು ೧೦೦ ಮುನಿಸಿಪಾಲಿಟಿಗಳು. ಇದರಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುವಂತಹ ರೀತಿಯಲ್ಲಿ ತಾವು ಕ್ರಮ ಕೈಗೊಂಡಿದ್ದೀರಿ. ಇದನ್ನು ನಾನು ಹೆಚ್ಚು ಬೆಳೆಸುವುದಕ್ಕೆ ಹೋಗದೆ, ಇದರ ಬಗ್ಗೆ ಮಾನ್ಯ ಸದಸ್ಯರು ತಮ್ಮ ಮನಸ್ಸನ್ನು ಒಲಿಸುವುದಕ್ಕೆ ಏನು ಹೇಳುತ್ತಾರೆ ಎಂಬುದನ್ನು ಕೇಳಬೇಕೆಂದು ಹೇಳಬಯಸು ತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಕಕ್ಕಿಲಾಯರವರು ಮತ್ತು ಇತರೆ ಮಾನ್ಯ ಸದಸ್ಯರು ತೀವ್ರತೆಯಿಂದ ಏನು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದರ ಬಗ್ಗೆ ಈಗತಾನೆ ನನಗೆ ಬಂದ ಮಾಹಿತಿಯನ್ನು ಸಭೆಯ ಗಮನಕ್ಕೆ ತರಬಯಸುತ್ತೇನೆ. ಒಟ್ಟು ೧೦೦ ಜನರನ್ನು ಅರೆಸ್ಟ್ ಮಾಡಿದ್ದಾರೆ. ಅದರಲ್ಲಿ ೧೭ ಜನ ಹುಬ್ಬಳ್ಳಿಯವರು, ೪೨ ಜನ ದಾವಣಗೆರೆಯವರು, ೩೭ ಜನ ಬೆಂಗಳೂರಿನವರು, ೫ ಜನ ಬೇರೆಯವರು ಇದ್ದಾರೆ. ಇವರ ಪೈಕಿ ೨೪ ಜನ ಹೆಣ್ಣು ಮಕ್ಕಳಿದ್ದಾರೆ. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರೂ ಅದರಲ್ಲೇ ಇದ್ದರೆಂದು ತಿಳಿದುಬಂದಿದೆ. ಇಷ್ಟು ಜನಗಳ ಪೈಕಿ ಯಾರಿಗೂ ಪೋಲೀಸ್‌ನವರು ತೊಂದರೆ ಮಾಡಿಲ್ಲ. ಇವರನ್ನು ಮಧ್ಯಾಹ್ನ ಸುಮಾರು ೧೨ ಗಂಟೆಗೆ ಅರೆಸ್ಟ್ ಮಾಡಿ ಸಾಯಂಕಾಲ ೪—೪$\frac{1}{2}$ ಗಂಟೆಗೆ ಬಿಡುಗಡೆ ಮಾಡಿದ್ದಾರೆ. ಇದುವರೆಗೆ ಮಾನ್ಯ ಸದಸ್ಯರು ಏನೇನು ಆಪಾದನೆಗಳನ್ನು ಈ ವಿಚಾರದಲ್ಲಿ ಮಾಡಿದ್ದಾರೆ ಅದೆಲ್ಲಾ ಸತ್ಯಕ್ಕೆ ದೂರವಾದುದು ಎಂದು ಹೇಳಬಯಸುತ್ತೇನೆ.

MR. SPEAKER.—I want to know the opinion of the treasury benches also. What is the opinion of the Government ?

SRI M.C. BASAPPA.—It all depends on the gravity of the situation. If the entire House wants to give its opinion, they must be given an opportunity to speak. ಇದರಲ್ಲಿ ರುಜು ಮಾಡದೇ ಇರುವವರೂ ಕೂಡ ಮಾತನಾಡಬಹುದು.

ಅಧ್ಯಕ್ಷರು.—ಎಷ್ಟು ಜನ ಮಾತನಾಡುತ್ತಾರೆ, ಎಷ್ಟು ಹೊತ್ತು ಮಾತನಾಡುತ್ತಾರೆ ಎಂಬುದನ್ನು ನಾವು ಸರಿಯಾಗಿ ತಿಳಿದುಕೊಳ್ಳದೇ ಹೋದರೆ ಕಷ್ಟವಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ಈ ವಿಷಯ ತಮ್ಮ ಅಪ್ಪಣೆಯನ್ನು ಪಡೆಯುವ ಹಂತದಲ್ಲಿದೆ. ಇದಕ್ಕೆ ಅಪ್ಪಣೆಯನ್ನು ಕೊಡುವುದು ಸಮಂಜಸ ಎಂಬುದನ್ನು ಮಾನ್ಯ ವಿರೋಧಪಕ್ಷದ ನಾಯಕರು ಸಾಕಷ್ಟು ಪ್ರತಿಪಾದನೆ ಮಾಡಿದಾ ರೆ. ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಮೊದಲು ಮಾನ್ಯ ವಿರೋಧಪಕ್ಷದ ನಾಯಕರು ಮಾತನಾಡಿ ಅವರು ಹೇಳುವುದು ಏನನ್ನಾದರೂ ಬಿಟ್ಟರೆ ಆಗ ಬಾಕಿ ಸದಸ್ಯರು ಅಂಥ ಹೆಚ್ಚಿನ ವಿಷಯಗಳನ್ನು ಮಾತನಾಡುವುದಕ್ಕೆ ಅವಕಾಶವಿದೆ. ಈಗ ಈ ನಿಲುವಳಿ ಸೂಚನೆ ತೆಗೆದುಕೊಳ್ಳುವುದಕ್ಕೆ ಅಪ್ಪಣೆ ಕೊಡಬೇಕೇ, ಬೇಡವೆ, ಎಂಬುದು ತಮಗೆ ಸೇರಿದ್ದು. ಏತಕ್ಕೆಂದರೆ ತಾವು ಕೇಳಿದಹಾಗೆ ಎಲ್ಲ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ. ಇನ್ನೂ ಯಾರು ಯಾರು ಮಾತನಾಡಬೇಕೆಂದು ಇರುತ್ತಾರೆಂದು ಕೇಳತಕ್ಕಂಥಾದ್ದು ತಮಗೆ ಬಿಟ್ಟಿರತಕ್ಕಂಥಾದ್ದಾಗಿರುತ್ತದೆ ಮಾನ್ಯ ಬಸಪ್ಪನವರು ಏನು ಹೇಳುತ್ತಿದ್ದಾರೆಂದರೆ ಈ ಮನೆಯ ಸದಸ್ಯರೆಲ್ಲರಿಗೂ ಮಾತನಾಡುವ ಅವಕಾಶ ಯಾವಾಗ ಬರುತ್ತದೆಂದು ಕೇಳುತ್ತಿದ್ದಾರೆ. If the House is seized of the whole matter, then everyone will have a right to speak. We are not at that stage now.

ಆ ತೀರ್ಮಾನದ ಪ್ರಕಾರ ಬೇಕಾದಷ್ಟು ಕಾಲಾವಕಾಶವಿದೆ. ಆಗ ಮಾತನಾಡಬಹುದು. ಏತಕ್ಕೆಂದರೆ ಈಗ ೭ ದಿವಸಗಳ ಕಾಲ ಈ ಮನೆ ಕುಳಿತುಕೊಳ್ಳಬೇಕೆಂದು ತೀರ್ಮಾನ ಮಾಡಿದ್ದಾರೆ. ಈಗಾಗಲೇ ಒಂದು ದಿವಸ ಮುಗಿಯುತ್ತಾ ಬಂದಿರುತ್ತದೆ. ವಿರೋಧಪಕ್ಷದ ನಾಯಕರು ಈವತ್ತು ಬಜೆಟ್ ಭಾಷಣದಲ್ಲಿ ಭಾಗವಹಿಸಿದರೆ ಈ ವಿಚಾರವನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು. ಸದಸ್ಯರು ಕೂಡ ಪ್ರಸ್ತಾಪ ಮಾಡಲಿಕ್ಕೆ ಸಾಧ್ಯವಾಗುತ್ತಿತ್ತು.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಯವರು ವಿಚಾರ ಮಾಡಬೇಕು. ಲಕ್ಷಾಂತರ ಜನರಿಗೆ ಈವತ್ತಿನ ದಿವಸ ಪ್ರಜಾಪ್ರಭುತ್ವದಲ್ಲಿ ಹಕ್ಕುಚ್ಯುತಿಯನ್ನು ತಂದಿದ್ದಾರೆ. ಇದು ಒಬ್ಬರ ಮಾತಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಒಂದು ವಿಷಯವನ್ನು ಹೇಳುತ್ತೇನೆ. ಒಂದೇ ಡಿವಿಜನ್‌ನಲ್ಲಿ ಒಂದು ಸಿಂಬಲ್‌ನ್ನು ೪–೫ ಜನರಿಗೆ ಕೊಟ್ಟರೆ ಓಟು ಮಾಡತಕ್ಕಂಥವನು ಯಾರಿಗೆ ಓಟು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರ ಕೋರ್ಟ್ ಮುಂದೆ ಇರುವುದರಿಂದ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದು ಬೇಡ.

ಶ್ರೀ ಸಿ. ಎಂ. ಇಬ್ರಾಹಿಂ.—ಒಂದೇ ಸಿಂಬಲನ್ನು ನಾಲ್ಕು ಜನಕ್ಕೆ ಕೊಟ್ಟಿರತಕ್ಕಂಥ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಿಂದೆ ೧೯೬೨ನೇ ಇಸವಿಯಲ್ಲಿ ಕಾರ್ಪೋರೇಷನ್ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಪಾರ್ಟಿ ಭಾಗವಹಿಸಿದ್ದಾಗ ಒಂದೇ ಸಿಂಬಲನ್ನು ನಾಲ್ಕು ಜನಕ್ಕೆ ಒಂದೇ ಸರ್ಕಲ್‌ನಲ್ಲಿ ಕೊಟ್ಟಿದ್ದರು, ಇದರ ಬಗ್ಗೆ ಕೋರ್ಟಿಗೆ ಹೋಗಿದ್ದಾರೆಂದರೆ ಸರ್ಕಾರ ಆವಾಗ ಮಲಗಿತ್ತೆ ಎಂದು ಕೇಳುತ್ತೇನೆ. ಚುನಾವಣೆ ನಡೆಯುವುದಕ್ಕೆ ಮೊದಲೇ ಇದನ್ನು ಏತಕ್ಕೆ ಯೋಚನೆ ಮಾಡಬಾರದಿತ್ತು. ಹಾಗೆಯೇ ೧೯೭೫ನೇ ಇಸವಿ ಮಾರ್ಚ್‌ನಲ್ಲಿ ರಾಣೆಬೆನ್ನೂರು ಮುನಿಸಿಪಲ್ ಎಲೆಕ್ಷನ್ ನಡೆದಾಗಲೂ ಕಾಂಗ್ರೆಸ್ ಪಾರ್ಟಿಯ ಸಿಂಬಲನ್ನು ಮತ್ತು ನ್ಯಾಷನಲ್ ಸಿಂಬಲನ್ನು ಕೊಟ್ಟಿದ್ದರಿಂದ ಅದೂ ಕೂಡ ಕೋರ್ಟಿಗೆ ಹೋಗಿ ಇರುತ್ತದೆ. ಆದ್ದರಿಂದ ಸಾಕಷ್ಟು ಕಾಲಾವಕಾಶವಿದ್ದರೂ ಕೂಡ ಅಧಿಕಾರಿಗಳು ಪರಿಶೀಲನೆ ಮಾಡದೆ ಚುನಾವಣೆಯನ್ನು ಮುಂದಕ್ಕೆ ಹಾಕಿರುವುದರಿಂದ ಲಕ್ಷಾಂತರ ರೂಪಾಯಿಗಳು ನಷ್ಟವಾಗುತ್ತಿದೆ. ಈ ರೀತಿ ಆಗುತ್ತಿರುವುದನ್ನು ನೋಡಿದರೆ ಚೌಪಾಟಿ ರಾಜನು ಅಧಿಕಾರ ಮಾಡಿದಂತೆ ನಿಮ್ಮ ಅಧಿಕಾರಿಗಳು ನಡೆದುಕೊಂಡಿದ್ದಾರೆಂದು ತಿಳಿಯುತ್ತದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಿರೆಂದು ಕೇಳುತ್ತೇನೆ. ೧೯೭೫ನೇ ಇಸವಿಯಲ್ಲಿ ರಾಣೆಬೆನ್ನೂರು ಮುನಿಸಿಪಲ್ ಎಲೆಕ್ಷನ್‌ನಲ್ಲಿ ನಿಮ್ಮ ಅಧಿಕಾರಿಗಳು ನ್ಯಾಷನಲ್ ಸಿಂಬಲನ್ನು ಅಲಾಟ್‌ಮಾಡಿರುವುದನ್ನು ನೋಡಿದರೆ ಹೈದರಾಬಾದ್ ಚಂದೂಲಾಲ್ ದರ್ಬಾರ್‌ನಂತೆ ಆಗಿದೆ. ಆತ ಕುದುರೆ ಹಿಂಭಾಗಕ್ಕೆ ಮುಖಮಾಡಿಕೊಂಡು ಸವಾರಿ ಮಾಡುತ್ತಿದ್ದನಂತೆ. ಆ ರೀತಿ ಚಂದೂಲಾಲ್ ದರ್ಬಾರ್ ಆಗಬಾರದೆಂದು ಹೇಳಿ ಈ ವಿಚಾರದಲ್ಲಿ ವಿಚಾರಣೆಯನ್ನು ಮಾಡಲು ಆಶ್ವಾಸನೆಯನ್ನು ಕೊಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ಇದರಲ್ಲಿ ಯಾರದೂ ತಪ್ಪು ಇಲ್ಲವೆಂದು ಹೇಳಬೇಕಾಗಿದೆ. ಕೆಲವು ಸಂದರ್ಭಗಳಲ್ಲಿ ರೂಲ್ಸ್ ಅಮೆಂಡ್‌ಮೆಂಟ್ ಮಾಡತಕ್ಕಂಥ ಸಂದರ್ಭಗಳೂ ಬರುತ್ತದೆ. ಓಟು ಮಾಡತಕ್ಕ ಮನುಷ್ಯನಿಗೆ ತಾನು ಯಾರಿಗೆ ಓಟು ಮಾಡಬೇಕು ಎನ್ನುವುದು ಸ್ಪಷ್ಟವಾಗಿ ತಿಳಿಯಬೇಕು. ಆ ರೀತಿ ಸಿಂಬಲನ್ನು ಕೊಡಬೇಕಾಗಿರುತ್ತದೆ. ವಿಶೇಷವಾಗಿ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಈ ರೀತಿ ಮುಂದೂಡಿದ್ದಾರೆಂದು ಮಾಡತಕ್ಕಂಥ ಆಪಾದನೆ ಖಂಡಿತವಾಗಿಯೂ ಸಮಂಜಸವಾದುದಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್.ಆರ್.ಬೊಮ್ಮಾಯಿ.—ಚುನಾವಣೆಗಳನ್ನು ಮುಂದೂಡುತ್ತಿರುವುದನ್ನು ನೋಡಿದರೆ ಈ ವಿಷಯ ಸರ್ಕಾರಕ್ಕೆ ಚೆನ್ನಾಗಿ, ಸ್ಪಷ್ಟವಾಗಿ ಗೊತ್ತಿತ್ತು ಎಂದು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು.—ಈವಾಗ ನಿಲುವಳಿ ಸೂಚನೆಗೆ ಒಪ್ಪಿಗೆ ಕೊಡಬೇಕೆಂದು ೧೭ ಜನ ಸದಸ್ಯರು ಸಹಿ ಕೇಳಿಹಾಕಿದ್ದಾರೆ. ಇದಕ್ಕೆ ಏನು ರೂಲಿಂಗ್ ಕೊಡಬೇಕೆಂಬುದರ ಬಗ್ಗೆ ವಿಚಾರಿಸುತ್ತಿದ್ದೇನೆ.

SRI QAMARUL ISLAM.—Sir, regarding the admissibility of the Adjournment motion moved by the hon. the Leader of the Opposition, I want to bring certain points to your kind notice, with your permission. It is my duty to bring certain points to your kind notice as a party leader of Muslim League.

ಅಧ್ಯಕ್ಷರು.—ಸ್ವಲ್ಪ ತಾವು ಕುಳಿತುಕೊಳ್ಳಿ, ನಿಮ್ಮ ಕಡೆ ಪಾರ್ಟಿ ಬಲ ಏನಿದೆ ಎಂಬುದು ನಿಮಗೂ ತಿಳಿದಿರುತ್ತದೆ, ನನಗೂ ತಿಳಿದಿರುತ್ತದೆ. ದಯವಿಟ್ಟು ಕೇಳಿ ನೋಟೀಸ್ ಕೊಟ್ಟಿದ್ದೇವೆಂದು ಹೇಳತಕ್ಕಂಥದ್ದರಲ್ಲಿ ಆಕ್ಷೇಪಣೆ ಏನೂ ಇಲ್ಲ. ಕೊಟ್ಟಿರುವವರೆಲ್ಲರೂ ಮಾತನಾಡಬೇಕೆಂದು ಹೇಳಿದರೆ ಸಾಧ್ಯವಾದಷ್ಟು ಅವಕಾಶವನ್ನು ಎಲ್ಲರಿಗೂ ಮಾಡಿಕೊಡೋಣ. ಎಲ್ಲರಿಗೂ ಅವಕಾಶ ಮಾಡಿಕೊಡಬೇಕೆಂಬುದು ನಿಮ್ಮ ಅಭಿಪ್ರಾಯದಂತೆ ನಮ್ಮ ಅಭಿಪ್ರಾಯವೂ ಅದೇ ಆಗಿರುತ್ತದೆ. ಆದರೆ ಮಾನ್ಯ ಎಂ. ಸಿ. ಬಸಪ್ಪನವರು ಮಾತನಾಡುತ್ತಾ ಎಲ್ಲರೂ ಮಾತನಾಡುವುದಕ್ಕೆ ಹಕ್ಕಿದೆ ಎಂದು ಹೇಳಿದರು, ಆ ರೀತಿ ಅವಕಾಶ ಎಲ್ಲಿದೆ ಎಂಬುದನ್ನು ತೋರಿಸುತ್ತೀರಾ ಎಂದು ಕೇಳುತ್ತೇನೆ.

SRI M. C. BASAPPA.—There are precedents where members who have not signed the adjournment motions have spoken in this House.

6-00 P. M.

SRI B. B. SAYANAK. -I raise a point of order Sir.

SRI M. C. NANIAH.—I am also raising a point of order. The question of propriety of the members is involved in this matter.

SRI QAMARUL ISLAM. - Just now you passed a remark about the strength of my party. We have been ruling in Kerala in coalition. We have ruled in West Bengal, and we were in electoral adjustment in Tamil Nadu. Such light remarks against my party would hurt the feelings of the party members.

SRI M. C. NANIAH. -The notice of the adjournment motion has been signed by 17 members and given under 50 of the Rules of Procedure. Sri M. C. Basappa has raised an issue that not only the signatories to the adjournment motion would speak but even others would speak and that there is a precedent to this effect. At the time of moving the adjournment motion, as a matter of convenience the Speaker gives permission to speak not as a matter of right The question of right of members to speak on the motion arises only when the motion is admitted by the Speaker and he in consultation with the leader of the Opposition fixes the time and the number of Speakers. At the admissibility stage, members should not be given a chance to speak. They can speak only after the admissibility of the motion and with the permission of the Speaker.

SRI H. GANGADHARAN.—Is it a point of order Sir ?

SRI M. C. NANIAH.—I am still on my legs Sir.

MR. SPEAKER.—It is already six 'O' clock. I want to know from the House whether it is agreeable to extend the time ; if so for how long ? I have to respect the sentiments of other members in this regard.

SRI K.H. RANGANATH (Minister for Agriculture and Parliamentary Affairs).—The Leader of the Opposition has made out a case ; it is for the Speaker to give consent or not. We are at that stage only. I have already submitted that the Leader of the Opposition and the members of the Opposition will have ample opportunity to discuss this matter while participating on the general discussion on the budget and also on the Demands for Grants. I have already made this statement. I request the Leader of the Opposition not to press the point. We have already decided that we should utilise six days for discussion on the general discussion on budget. I would request even now the Leader of the Opposition not to press the point. He has ventilated not only his views but also the views of other members.

SRI H. GANGADHARAN.—Some of us have got some more points to add.

SRI K. H. RANGANATH.—If that is the case, we can sit for another 10 minutes if they want to contribute to the points that have already been made by the Leader of the Opposition. It is now six 'O' clock. Let us sit for another 10 minutes more. It is not fair on our part to sit beyond six 'O' clock ; let us close our business at 6 P. M. for the benifit of other members who have not been able to speak and who feel like speaking we can sit for another 10 minutes. The House can extend the time right upto 6.15 P. M.

MR. SPEAKER.—I am prepared to sit even for two hours more from now onwards but I want the House to permit me to do so.

SRI S. R. BOMMAI.—The matter may be taken up tomorrow and debated upon.

SRI G. B. SHANKAR RAO.—Unless the time is extended our sitting beyond six 'O' clock will not be in order.

MR. SPEAKER.—Now I have to request the Government to move a closure motion.

SRI S. R. BOMMAI.—Let the time be extended for one hour.

MR. SPEAKER.—The Press representatives have expressed their inability to cover the proceedings of the House beyond six 'O' clock. Also it is the intention of the Business Advisory Committee which is a body of this House not to sit beyond six 'O' clock. If we sit beyond six ·O' clock. The stipulated time, we will be disrespecting the wishes of that Committee. Now I want to know whoare the members that are anxious to speak on this motion.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರದವರು ಈ ವಿಚಾರದ ಬಗ್ಗೆ ಬಹಳ ಲಘುವಾಗಿ ತಿಳಿದುಕೊಂಡಿದ್ದಾರೆ ಎಂಬುದಾಗಿ ನಾನು ಅರ್ಥಮಾಡಿಕೊಂಡಿದ್ದೇನೆ. ಈ ವಿಚಾರ ಬಹಳ ಗಂಭೀರ ವಾದುದು. ಇದು ಬಿಡತಕ್ಕಂಥ ವಿಚಾರವಲ್ಲ. ಇದರಲ್ಲಿ ಮುಖ್ಯವಾಗಿ ವಿರೋಧಪಕ್ಷದವರ ಹಾಗೂ ಅದರಲ್ಲೂ ಸಾಮಾನ್ಯ ಜನತೆಯ ಹಕ್ಕಿನ ಪ್ರಶ್ನೆ ಬಂದಿದೆ. ನಾಳೆ ಮೇಲ್ಮನೆಗೆ ತಾಲ್ಲೂಕು ಬೋರ್ಡಿನಿಂದ ಆರಿಸಿ ಕಳುಹಿಸುವ ಚುನಾವಣೆಯ ಬಗ್ಗೆ ಹಕ್ಕಿನ ಚ್ಯುತಿ ಬಂದಿದೆ. ಇದನ್ನು ವಿಚಾರ ಮಾಡದೆ ಚರ್ಚೆ ಮಾಡದೆ ಸುಮ್ಮನೆ ತಾಳ್ಮೆಯಿಂದಿರುವುದಕ್ಕೆ ತಯಾರಾಗಿಲ್ಲ. ಇದರ ಬಗ್ಗೆ ಅನೇಕ ಮಾನ್ಯ ಮಿತ್ರರು ಮಾತನಾಡುವವರಿದ್ದಾರೆ. ಇದನ್ನು ಮುಗಿಸೋಣ ಎನ್ನುವ ವಿಚಾರವಲ್ಲ. ನಮ್ಮನ್ನು ಸಂಪೂರ್ಣ ವಾಗಿ ಕೇಳಿಕೊಂಡು ನಂತರ ತಾವು ನಿರ್ಣಯ ಕೊಡಬೇಕು. ಹೇಳುವುದಕ್ಕೆ ನಮಗೆ ಸಂಪೂರ್ಣವಾದ ಅವಕಾಶ ಬೇಕು. ಆದ್ದರಿಂದ ತಾವು ಇದರ ಬಗ್ಗೆ ಪುನಃ ಆಲೋಚನೆ ಮಾಡಬೇಕು. ಕಾಲ ನಿಗದಿ ಮಾಡಿ.

ಅಧ್ಯಕ್ಷರು —ನಾನು ಯಾವ ಉದ್ದೇಶದಿಂದ ಹೇಳಿದೆ ಎನ್ನುವುದನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಅರ್ಥ ಮಾಡಿಕೊಳ್ಳಬೇಕು·

ಶ್ರೀ ಎಸ್. ಆರ್. ಬೊಮ್ಮಾಯಿ.—ಇದರ ಬಗ್ಗೆ ಆಲೋಚನೆ ಮಾಡಿ ನಿರ್ಣಯ ಕೊಡಿ. ಈ ವಿಚಾರ ಬಹಳ ಗಂಭೀರವಾದುದಾಗಿದೆ.

ಅಧ್ಯಕ್ಷರು.—೧೭ ಜನ ನೋಟಿಸಿಗೆ ಸಹಿ ಮಾಡಿ ಕೊಟ್ಟಿದ್ದಾರೆ. ೧೭ ಜನರು ಮಾತನಾಡಬೇಕೆಂದು ಹೇಳುತ್ತಿದ್ದೀರಿ ೪-೩೦ ರಿಂದ ಇದಕ್ಕೇ ಕಾಲ ವ್ಯಯವಾಗಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದಕ್ಕೆ ಅರ್ಧ ಘಂಟೆ ಕೂಡ ಸಿಕ್ಕಿಲ್ಲ. ಅರ್ಧದಲ್ಲಿ ಬೇರೆ ವಿಚಾರ ಬಂದದ್ದು ತಮಗೂ ಗೊತ್ತಿದೆ. ಅದಕ್ಕೇ ಹೆಚ್ಚು ಸಮಯ ಹೋಗಿದೆ. ಈ ವಿಚಾರ ಬಹಳ ಗಂಭೀರವಾದ ವಿಚಾರವಾಗಿದೆ. ೬ ದಿವಸಗಳಲ್ಲಿ ಬಡ್ಜೆಟ್ ಮೇಲಿನ ಸಾಮಾನ್ಯ ಚರ್ಚೆ ಮಾಡಬೇಕೆಂದು ಇದೆ. ಅದರಂತೆ ಮುಗಿಸುತ್ತೇವೆ.

ಅಧ್ಯಕ್ಷರು.—ಈ ಮನೆಯ ಕಾರ್ಯಕಲಾಪಗಳು ಸುಲಲಿತವಾಗಿ ನಡೆಯಬೇಕೆಂದು ವಿಚಾರ ಮಾಡುತ್ತಿರುವಾಗ ೧೭ ಜನರೂ ಮಾತನಾಡಬೇಕೆಂದು ಹೇಳುವುದಾದರೆ ಇದರಿಂದ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇದನ್ನು ತೀರ್ಮಾನ ಮಾಡುವುದಕ್ಕೆ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲರೂ ಮಾತನಾಡುವುದಿಲ್ಲ.

ಅಧ್ಯಕ್ಷರು.—ಯಾರು ಯಾರು ಮಾತನಾಡುತ್ತಾರೆ ?.

ಶ್ರೀ ಎಸ್. ಆರ್. ಬೊಮ್ಮಾಯಿ.—ಸುಮಾರು ೫–೬ ಜನ ಮಾನ್ಯ ಸದಸ್ಯರು ಮಾತನಾಡಬಹುದು.

ಶ್ರೀ ಬಿ. ಬಾಸ್ಕರ ಶೆಟ್ಟಿ.—ಈ ಕಡೆಯು ೧೦–೧೨ ಜನ ಮಾನ್ಯ ಸದಸ್ಯರು ಮಾತನಾಡುವವರಿದ್ದಾರೆ ಆವಾಗ ೨–೩ ದಿವಸ ಇದಕ್ಕೇ ಹೋಗುತ್ತದೆ. ಇದರ ಬಗ್ಗೆ ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಯವರು ಇನ್ನೂ ಬೇಕಾದಷ್ಟು ಸಂದರ್ಭ ಇದೆ, ೬ ದಿವಸಗಳ ಕಾಲ ಬಜ್ಜೆಟ್ಟಿನ ಮೇಲೆ ಸಾಮಾನ್ಯ ಚರ್ಚೆಯಾಗುವ ಸಂದರ್ಭದಲ್ಲಿ ಚರ್ಚೆ ಮಾಡಬಹುದು ಎಂದು ಈಗಾಗಲೇ ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಜನರಲ್ ಡಿಸ್‌ಕಷನ್ ಆನ್ ಬಡ್ಜೆಟ್ ಎಂಬ ಶಬ್ದವನ್ನು ಕೇಳಿ ಕೇಳಿ ಬೇಜಾರಾಗಿದೆ. ಈ ವಿಚಾರ ಬಹಳ ಗಂಭೀರವಾದುದು. ಇದನ್ನು ಡಿಮ್ಯಾಂಡ್ಸ್ ಮೇಲೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ವಿರೋಧಪಕ್ಷದ ನಾಯಕರು ಯಾತಕ್ಕೆ ಕೋಪ ಮಾಡಿಕೊಳ್ಳುತ್ತಿದ್ದಾರೋ ನನಗೆ ಅರ್ಥವಾಗಲಿಲ್ಲ. ಅವರ ಆರೋಗ್ಯದ ದೃಷ್ಟಿಯಿಂದಲೂ ಅವರು ಕೋಪ ಮಾಡಿಕೊಳ್ಳುವುದು ಒಳ್ಳೆಯದಲ್ಲ. ಈಗ ಇಲ್ಲಿ ಅಂಥ ಮಹತ್ವದ ವಿಚಾರ ಏನೂ ಇಲ್ಲ. ಚುನಾವಣೆಯನ್ನು ಚುನಾವಣಾ ಆಯೋಗದವರು ಡಿಸೆಂಬರ್‌ವರೆಗೆ ಮುಂದಕ್ಕೆ ಹಾಕಿದರೂ ನಮ್ಮ ಅಭ್ಯಂತರವೇನೂ ಇಲ್ಲ. ಇವತ್ತು ಎಲೆಕ್ಷನ್ ಕಮಿಷನ್ ಕೇಂದ್ರ ಸರ್ಕಾರದ ಕೈಯಲ್ಲಿದೆ. ಚುನಾವಣೆ ಮುಂದಕ್ಕೆ ಹಾಕುವುದು ಬಿಡುವುದು ಅವರಿಗೆ ಸೇರಿದ್ದು. ನಮ್ಮ ಕೈಯಲ್ಲಿಲ್ಲ. ಇವರು ಮುನಿಸಿಪಾಲಿಟಿಗಳ ಚುನಾವಣೆ ಆದಮೇಲೆ ವಿಧಾನಪರಿಷತ್ತಿಗೆ ಚುನಾವಣೆ ಮಾಡಿಸಲಿ, ನಾವು ಅಡ್ಡಿ ಬರುವುದಿಲ್ಲ. ಆದ್ದರಿಂದ ಈಗ ನಾನು ಏನು ಹೇಳುತ್ತಿದ್ದೇನೆಂದರೆ ಮಾನ್ಯ ವಿರೋಧಪಕ್ಷದವರು ಈಗಾಗಲೇ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ಇವತ್ತು ಈ ನಿಲುವಳಿ ಸೂಚನೆಗೆ ಅವಕಾಶ ಕೊಡುವ ಅವಶ್ಯಕತೆ ಇಲ್ಲ ಎಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಒಂದು ವೇಳೆ ಎಲ್ಲಾ ವಿಚಾರದಲ್ಲೂ ಬಿಸಿನೆಸ್ ಅಡ್ವೈಸರಿ ಕಮಿಟಿ ಬಿಟ್ಟು ಇಲ್ಲೇ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದರೆ ನನ್ನ ಅಭ್ಯಂತರ ಇಲ್ಲ. ಅಂಥ ಪ್ರಿಸಿಡೆಂಟ್ ಕ್ರಿಯೇಟ್ ಮಾಡಿ ನಾವು ಎಲ್ಲಾದಕ್ಕೂ ಇಲ್ಲೇ ಕುಳಿತುಕೊಂಡು ಕೈ ಎತ್ತೋಣ ಎಂದು ಹೇಳಿದರೆ ಅದು ಸರಿಯಾದ ಸಂಪ್ರದಾಯ ಆಗುತ್ತದೆಯೇ? We have decided in the Business Advisory Committee. Let us follow the decision taken there. ಇನ್ನೂ ಒಂದು ಹತ್ತು ನಿಮಿಷ ಬೇಕಾದರೆ ಕುಳಿತುಕೊಳ್ಳೋಣ. ಕುಳಿತುಕೊಂಡು ಈ ವಿಷಯವನ್ನು ಮುಕ್ತಾಯ ಮಾಡೋಣ. ಇದನ್ನು ನಾವು ಏನೂ ಲಘುವಾಗಿ ತೆಗೆದುಕೊಳ್ಳುತ್ತಿಲ್ಲ. ಇವತ್ತಿನ ದಿವಸ ಅವರಿಗೆ (ವಿರೋಧಪಕ್ಷದವರಿಗೆ) ಹೆಚ್ಚು ಅಧಿಕಾರ ಇದೆ. ವಿಧಾನಪರಿಷತ್ತಿನ ಏಳು ಸ್ಥಾನಕ್ಕೆ ಚುನಾವಣೆಯನ್ನು ಬೇಕಾದರೆ ಮುಂದಕ್ಕೆ ಹಾಕಿಸಿಕೊಳ್ಳಲಿ. ಮುನಿಸಿಪಲ್ ಎಲೆಕ್ಷನ್ ಆಗುವವರಿಗೆ ಚುನಾವಣೆಯನ್ನು ಮುಂದಕ್ಕೆ ಹಾಕಿಸಿಕೊಳ್ಳಲಿ. We never come in the way. Why should they suspect our bonafides ?

ಶ್ರೀ ಗೋವಿಂದ ಪಿ. ವಡೆಯರಾಜ್.—ಸ್ವಾಮಿ, ನಾನು ಸರ್ಕಾರಕ್ಕೆ ಒಂದು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಅಧ್ಯಕ್ಷರು.—ಈಗ ವಿಚಾರ ಏನು ಎಂಬುದು ತಮಗೆ ಗೊತ್ತಿದೆಯೇ? ಅಡ್ಜರ್ನ್‌ಮೆಂಟ್ ಮೋಷನ್ನಿನ ಅಡ್ಮಿಸಬಿಲಿಟಿ ಬಗ್ಗೆ ಚರ್ಚೆ ನಡೆಯುತ್ತಿದೆ. ಬೇರೆ ವಿಷಯವನ್ನು ಬೇಕಾದರೆ ಡಿಪಾರ್ಟ್‌ಮೆಂಟಿನ ಡಿಮ್ಯಾಂಡ್ ಬಂದಾಗ ಮಾತನಾಡಬಹುದು.

ಶ್ರೀ ಗೋವಿಂದ ಪಿ. ವಡೆಯರಾಜ್.—ಈಗ ನಾವು ೧೭ ಜನ ಸಹಿ ಮಾಡಿ ನೋಟೀಸ್ ಕೊಟ್ಟಿದ್ದೇವೆ. ಈಗ ಇದಕ್ಕೆ ಹೇಗೆ ಪರಿಹಾರ ಕಂಡುಹಿಡಿಯಬೇಕು ಎಂಬುದು ತಮ್ಮ ಮುಂದಿರುವ ಪ್ರಶ್ನೆ. ನಮ್ಮ ಮಾನ್ಯ ವಿರೋಧಪಕ್ಷದ ನಾಯಕರು ಒಂದು ಸಲಹೆ ಮಾಡಿದ್ದಾರೆ. ಈ ಮುನಿಸಿಪಲ್ ಎಲೆಕ್ಷನ್‌ಗಳನ್ನು ಇಂಥ ತಾರೀಖಿಗೆ ನಿರ್ದಿಷ್ಟವಾಗಿ ಮಾಡುತ್ತೇವೆ ಎಂಬ ಆಶ್ವಾಸನೆಯನ್ನು ಸರ್ಕಾರ ಕೊಡುವುದಾದರೆ ನಾವು ನಮ್ಮ ಅಡ್ಜರ್ನ್‌ಮೆಂಟ್ ಮೋಷನ್ನಿನ ಬಗ್ಗೆ ಪ್ರೆಸ್ ಮಾಡುವುದಿಲ್ಲ ಎಂದು. ಮಾನ್ಯ ರಂಗನಾಥ್ ಅವರು ವಿರೋಧಪಕ್ಷದವರು ಎಲ್ಲರೂ ಮಾತನಾಡುತ್ತಾ ಹೋದರೆ ಚರ್ಚೆ ಮುಗಿಸುವುದಕ್ಕಾಗುವುದಿಲ್ಲ ಎಂಬ ರೀತಿಯಲ್ಲಿ ಹೇಳಿದ್ದಾರೆ. ಅವರು ವಿರೋಧಪಕ್ಷದಲ್ಲಿದ್ದಾಗ ಏನೇನು ಮಾಡಿದ್ದಾರೆ ಎಂಬ ಬಗ್ಗೆ ವಿವರವನ್ನು ಈಗ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಕೆ. ಎಚ್. ರಂಗನಾಥ್ ಅವರಾಗಲೀ, ಶ್ರೀ ಕಂಠಯ್ಯನವರಾಗಲೀ ಈ ವಿಷಯದಲ್ಲಿ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗಾಗಲೇ ಸಾಕಷ್ಟು ಕಾಲ ಆಗಿರುವುದರಿಂದ ಮತ್ತು ಈ ಕಡೆ ವಿರೋಧಪಕ್ಷದವರು ಹೆಚ್ಚು ಮಾತನಾಡಬೇಕಾಗಿರುವುದರಿಂದ ಈ ವಿಷಯವನ್ನು ನಾಳೆ ತೆಗೆದುಕೊಳ್ಳಲಿ. ಅವರು ಬೇಕಾದರೆ ಮುಖ್ಯಮಂತ್ರಿಗಳ ಜೊತೆಯಲ್ಲಿ ಮತ್ತು ಸಹೋದ್ಯೋಗಿಗಳ ಜೊತೆಯಲ್ಲಿ ಮಾತನಾಡಿ ಮುನಿಸಿಪಲ್ ಎಲೆಕ್ಷನ್ ಯಾವಾಗ ಮಾಡುತ್ತಾರೆಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಿ. ತೀರ್ಮಾನ ತೆಗೆದುಕೊಂಡು ನಾಳೆ ಸಭೆಗೆ ತಿಳಿಸಲಿ. ನಾವು ಆಗ ಈ ನಿಲುವಳಿ ಸೂಚನೆಯ ಬಗ್ಗೆ ಒತ್ತಾಯ ಮಾಡುವುದಿಲ್ಲ. ಈಗ ಸಮಯ ೬–೧೫ ಆಗಿದೆ. ಆದ್ದರಿಂದ ನಾನು ಕೊನೆಯದಾಗಿ ಮಾನ್ಯ ಅಧ್ಯಕ್ಷರ ಮುಖಾಂತರ ಸಲಹೆ ಮಾಡುವುದೇನೆಂದರೆ ಮಾನ್ಯ ಕೆ.ಹೆಚ್. ರಂಗನಾಥ್ ಅವರು ಮತ್ತು ಶ್ರೀಕಂಠಯ್ಯನವರು ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಿ ನಿರ್ದಿಷ್ಟವಾದ ತಾರೀಖಿಗೆ ಪುರಸಭೆಗಳ ಚುನಾವಣೆ ಮಾಡುವ ಬಗ್ಗೆ ಆಶ್ವಾಸನೆ ಕೊಡುವುದಕ್ಕೆ ಪ್ರಯತ್ನ ಮಾಡುವುದಾದರೆ ಈ ಸಮಸ್ಯೆ ಪರಿಹಾರವಾಗುತ್ತದೆ.

SRI B. BASAVALINGAPPA.—Sir, I have heard the arguments from both the sides. Rule 50 is very clear. It says as follows:—

> "Subject to the provisions of these rules, a motion for an adjournment of the business of the Assembly for the purpose of discussing a definite matter of urgent importance may be made with the consent of the Speaker".

ನಾನು ಬಹಳ ದಿವಸಗಳಿಂದ ಅಸೆಂಬ್ಲಿ ಸದಸ್ಯನಾಗಿದ್ದೇನೆ. ನನಗೆ ವಿಷಯಗಳು ಗೊತ್ತಿವೆ. ನನ್ನ ಅಭಿಪ್ರಾಯ ಏನೆಂದರೆ ತಾವು (ವಿರೋಧ ಪಕ್ಷದವರು) ನೋಟೀಸ್ ಕೊಡುತ್ತೀರಿ. ಕೊಟ್ಟಮೇಲೆ ಮೋಡ ಆಫ್ ದಿ ನೋಟೀಸ್ ಬಗ್ಗೆ ಮಾತನಾಡುತ್ತೀರಿ. ಆಗ ಸಭಾಧ್ಯಕ್ಷರು ಕನ್‌ವಿನ್ಸ್ ಆದರೆ ಕನ್‌ಸೆಂಟ್ ಕೊಡುತ್ತಾರೆ. ಕನ್‌ಸೆಂಟ್ ಕೊಟ್ಟಮೇಲೆ ನಂತರ ಈ ವಿಷಯದ ಬಗ್ಗೆ ಚರ್ಚೆ ಪ್ರಾರಂಭಿಸಬಹುದು. ರೂಲ್ ೫೪ ಏನು ಹೇಳುತ್ತದೆಂದರೆ Then Rule 54 (1) says as follows :—

> "The Speaker, if he gives consent under rule 50 and holds that the matter proposed to be discussed is in order, shall after the questions and before the list of business is entered upon, call the member concerned who shall rise in his place and ask for leave to move the adjournment of the Assembly..."

ಆದ್ದರಿಂದ ಅಧ್ಯಕ್ಷರು ಕನ್‌ಸೆಂಟ್ ಕೊಟ್ಟಮೇಲೆ ಯಾರು ಎಷ್ಟು ಬೇಕಾದರೂ ಮಾತನಾಡಬಹುದು. ಆದರೆ ಕನ್‌ಸೆಂಟ್ ಕೊಡುವುದಕ್ಕಿಂತ ಮುಂಚಿತವಾಗಿ ನಾವು ೧೦ ಜನ ಮಾತನಾಡುತ್ತೇವೆ ೧೫ ಜನ ಮಾತನಾಡುತ್ತೇವೆ ಎಂದು ಆ ಕಡೆಯವರು, ಈ ಕಡೆಯವರು ಹೇಳುವುದು ಸಂಪ್ರದಾಯಕ್ಕೆ ವಿರೋಧ

ವಾಗುತ್ತದೆ.ದಯಮಾಡಿ ಎಲ್ಲರೂ ಈ ಮನೆಯ ಸಂಪ್ರದಾಯವನ್ನು ಉಳಿಸಿಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಈ ನಿಲುವಳಿ ಸೂಚನೆಗೆ ಇನ್ನೂ ಕನ್‌ಸೆಂಟ್ ಕೊಟ್ಟಿಲ್ಲ ಕನ್‌ಸೆಂಟ್ ಕೊಡುವುದಕ್ಕಿಂತ ಮುಂಚೆಯೇ ಇಷ್ಟು ಜನ ಮಾತನಾಡುತ್ತೇವೆ ಎಂದು ಹೇಳುವುದು ಸರಿಯಲ್ಲ. ದಯಮಾಡಿ ಈ ಮನೆಯ ಸಂಪ್ರದಾಯವನ್ನು ಉಳಿಸಿಕೊಳ್ಳಬೇಕು, ಇದಕ್ಕೆ ಮಾನ್ಯತೆ ಕೊಡಬೇಕು ಎಂದು ಸದಸ್ಯರಲ್ಲಿ ಕೇಳಿಕೊಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಸಂಪ್ರದಾಯದ ಬಗ್ಗೆ ಎಲ್ಲರಿಗೂ ಗೊತ್ತಿದೆ. ಅಡ್ಜರ್ನ್‌ಮೆಂಟ್ ಮೋಷನ್ನಿನ ಅಡ್ಮಿಸಬಿಲಿಟಿ ಸಲುವಾಗಿ ಎಷ್ಟು ಜನ ಮಾತನಾಡಬೇಕು ಎಂಬುದು ಸ್ಪೀಕರ್‌ರವರ ನಿರ್ಧಾರಕ್ಕೆ ಬಿಟ್ಟಿದೆ. ಇಲ್ಲಿ ಸಹಿ ಮಾಡಿದವರು ಎಲ್ಲರೂ ಮಾತನಾಡಬೇಕೇ, ಅಥವಾ ಮಾಡದೇ ಇದ್ದವರೂ ಮಾತನಾಡಬೇಕೇ ಎಂಬ ಬಗ್ಗೆ ಎಷ್ಟೋ ಸಲ ಈ ಮನೆಯಲ್ಲಿ ಚರ್ಚೆಯಾಗಿದೆ. It is entirely the discretion of the Speaker. ನಾವು ಅಧ್ಯಕ್ಷರ ಮನಸ್ಸೊಲಿಸುವುದಕ್ಕೆ ಪ್ರಯತ್ನ ಮಾಡುತ್ತಿರುವುದರಿಂದ ನಮ್ಮ ವಾದವನ್ನು ಕೇಳಿ ಸೂಚನೆಗೆ ಅಪ್ಪಣೆ ಕೊಡತಕ್ಕ ಹಕ್ಕು ಅಧ್ಯಕ್ಷರಿಗಿದೆ. ಅಧ್ಯಕ್ಷರ ಮನವೊಲಿಸಲಿಕ್ಕೆ ಪ್ರಯತ್ನ ಮಾಡತಕ್ಕ ಹಕ್ಕು ನಮಗಿದೆ. ತಾವು (ಅಧ್ಯಕ್ಷರು) ಅಪ್ಪಣೆ ಕೊಟ್ಟರೆ ನಾವು ಮಾತನಾಡಬೇಕಾಗುತ್ತದೆ. ಇದರ ಬಗ್ಗೆ ಪದೇ ಪದೇ ಚರ್ಚೆ ಮಾಡುವುದು ಬೇಡ. ಅಡ್ಮಿಸಬಿಲಿಟಿ ಬಗ್ಗೆ ಇಲ್ಲಿ ಮಾತನಾಡಬೇಕು ಎಂಬುದೇ ಇರಲಿಲ್ಲ ಮೊದಲು. ಒಂದು ಕಾಲದಲ್ಲಿ ಅಧ್ಯಕ್ಷರು ಛೇಂಬರ್‌ನಲ್ಲಿ ಡಿಸೈಡ್ ಮಾಡುತ್ತಿದ್ದರು. It is a matter between the Member and Hon. Speaker. ಈ ಮನೆಯಲ್ಲಿ ಒಂದು ಸಾರಿ ಒಂದು ನಿಲುವಳಿ ಸೂಚನೆ ಬಗ್ಗೆ ಚರ್ಚೆ ಮೂರು ದಿವಸ ನಡೆದಿದೆ ಈ ತರಹ ಸಂಪ್ರದಾಯ ಇದೆ. ಇದರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ತರಹ ಸಂದರ್ಭಗಳು ಬಂದಾಗ ಸಭಾಧ್ಯಕ್ಷರ ಡಿಸ್ಕ್ರಿಷನ್ ಮೇಲೆ ವಿಷಯಗಳು ನಿಲ್ಲುತ್ತವೆ. ಈಗ ಚುನಾವಣೆ ನಡೆಸುವುದು ಬಿಡುವುದು ಚುನಾವಣಾ ಆಯೋಗಕ್ಕೆ ಸಂಬಂಧಿಸಿದ್ದು, ಆ ಬಗ್ಗೆ ನಿರ್ಣಯ ಮಾಡತಕ್ಕದ್ದು ನಮಗೆ ಸಂಬಂಧ ಪಟ್ಟಿದ್ದಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ನಾವು ನೀವು ಇಬ್ಬರೂ ಸೇರಿ ಎಲೆಕ್ಷನ್ ಕಮಿಷನ್‌ಗೆ ಮನವಿ ಮಾಡಿಕೊಳ್ಳೋಣ. Election Commission if an independent statutory body. Let us request the Election Commission jointly, Let this House make a recommendation to the Election Commission.

SRI K. H. RANGANATH.—Would it be proper for this House to make such a resolution?

ಶ್ರೀ ಎಸ್. ಆರ್. ಬೊಮ್ಮಾಯಿ.—ಅಧ್ಯಕ್ಷರೇ, ಈಗ...

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್ ಅಡ್ಮಿಸಬಿಲಿಟಿ ಬಗ್ಗೆ ತಾವು ಮಾತನಾಡಿ. ಅಷ್ಟು ಹೊತ್ತಿನಿಂದ ಹೇಳುತ್ತಿದ್ದೀರಿ. ಯಾವುದಾದರೂ ಹೊಸ ವಿಚಾರ ಇದ್ದರೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹೇಳುವುದಕ್ಕೆ ಈ ಕಡೆ ಸದಸ್ಯರಿಗೆ ಸಮಯ ಬೇಕು. ಈಗ ಸಮಯ ಇಲ್ಲದೇ ಇದ್ದರೆ ಸಭೆಯನ್ನು ನಾಳೆಗೆ ಮುಂದಕ್ಕೆ ಹಾಕಿ ನಾಳೆ ಈ ವಿಷಯ ತೆಗೆದುಕೊಳ್ಳಬಹುದು.

ಶ್ರೀ ಕೆ. ಎಚ್. ರಂಗನಾಥ್.—ಮಾನ್ಯ ವಡೆಯರಾಜ್ ಅವರು ಹೇಳಿದರು, ಇದನ್ನು ಪ್ರೆಸ್ ಮಾಡುವುದಿಲ್ಲ, ಮಾನ್ಯ ಮಂತ್ರಿಗಳು, ಶ್ರೀಕಂಠಯ್ಯನವರು ಚುನಾವಣೆ ಯಾವಾಗ ಮಾಡುತ್ತೇವೆ ಎಂಬ ಬಗ್ಗೆ ಹೇಳಲಿ ಎಂದು. ನಾನು ಆಗಲೇ ಹೇಳಿದ್ದೇನೆ. ಹೈಕೋರ್ಟ್‌ನಲ್ಲಿರತಕ್ಕ ಕೇಸನ್ನು ಜಾಗ್ರತೆಯಾಗಿ ತೀರ್ಮಾನ ಮಾಡಿಸಬೇಕು ಎಂದು. early hearingಗೆ ಅಪ್ಲಿಕೇಷನ್ ಹಾಕಿ ತೀರ್ಮಾನ ತೆಗೆದುಕೊಂಡು ತಕ್ಷಣ ಮಾಡುತ್ತೇವೆ ಎಂದು ಹೇಳಿದ್ದೇವೆ. ಅಂದರೆ ನಮಗೂ ಕಾತುರತೆ ಇದೆ ಚುನಾವಣೆ ಮಾಡುವುದಕ್ಕೆ ಎಂಬುದು ತೋರುತ್ತದೆ. ಚುನಾವಣೆ ಮುಂದೂಡಬೇಕು ಎಂಬುದು ನಮ್ಮ ವಿಚಾರ ಅಲ್ಲ. ಆದ್ದರಿಂದ ಈ ನಿಲುವಳಿ ಸೂಚನೆಗೆ ಪ್ರೆಸ್ ಮಾಡುವುದು ಅನಾವಶ್ಯಕ.

ಶ್ರೀ ಗೋವಿಂದ ಪಿ. ವಡೆಯರಾಜ್.—ಮಾನ್ಯ ಮಂತ್ರಿಗಳು ಅಪ್ಲಿಕೇಶನ್ ಹಾಕುತ್ತೇವೆಂದು ಹೇಳಿದರು. ಎರಡು ಮೂರು ದಿವಸದಲ್ಲಿ ಮಾನ್ಯ ಮಂತ್ರಿಗಳು ಈ ಬಗ್ಗೆ ಹೈಕೋರ್ಟಿಗೆ early

hearingಗೆ ಅಪ್ಲಿಕೇಷನ್ ಹಾಕಿದರೆ ಬೇಗ ತೀರ್ಮಾನ ತೆಗೆದುಕೊಳ್ಳಬಹುದು, The petition will be disposed off and there is no difficulty in finding a date. In that way you will be more safer.

ಶ್ರೀ ಎಸ್.ಆರ್. ಬೊಮ್ಮಾಯಿ.—ತಾವು ಈ ವಿಚಾರದ ಬಗ್ಗೆ ನಿರ್ಣಯ ಕೊಡುವುದಾದರೆ ನಮ್ಮೆಲ್ಲರ ಮಾತುಗಳನ್ನು ಸಂಪೂರ್ಣವಾಗಿ ಕೇಳಿಕೊಂಡು ನಾಳೆ ಕೊಡಬೇಕು. ಇದು ಬಹಳ ಗಂಭೀರ ವಾದ ವಿಚಾರವಾಗಿದೆ.

SRI A. LAKSHMISAGAR.—Some constitutional issues have also been instantly raised during the discussion regarding the admissibility of this adjournment motion. Let us have some time. We are prepared to sit and think over the matter during this night and to-morrow we may be in a better position to apply our mind and have enlightened discussions. It may not be necessary thereafter to go into the details of the motion which is sought to be moved. Let us have some time. 'This is the decision of the Election Commission and we cannot do anything'. That is what the Hon. Minister said. Let us apply our mind. Let them also apply their mind. We have to consider whether the Election Commission will go ahead by announcing the calendar of events for holding the election to the Legislative Council from the Local Authorities' Constituency without the State Government's administrative machinery being placed at its disposal. If the State Government says 'We are not in a position to place the administrative machinery at your disposal', I am sure the Election Commission will take that circumstance into consideration and act accordingly. Therefore, it is not all that difficult. Let us think over this matter and take a final decision. Let us not do anything in haste and repent thereafter.

SRI K. H. RANGANATH.—If you can wait till to-morrow, it is not a matter of urgency at all.

(Sarvashri G.P. Wodeyaraj, S.R. Bommai and Smt. Pramila and some other members stood up and began to shout simultaneously).

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಅಂತಿಮ ತೀರ್ಮಾನ ಕೊಡುವುದಕ್ಕೆ ಮೊದಲು ನಮ್ಮನ್ನು ಕೇಳಬೇಕು.

ಅಧ್ಯಕ್ಷರು,- ಇಷ್ಟು ಹೊತ್ತು ನಿಮ್ಮನ್ನು ಕೇಳಲಿಲ್ಲವೆ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುವಾಗ ೧೦ ಗಂಟೆ ಯುವರೆಗೆ ಕುಳಿತಿದ್ದೇವೆ. ಈ ವಿಚಾರದ ಬಗ್ಗೆ ಅನೇಕ ಮಾನ್ಯ ಸದಸ್ಯರುಗಳು...

SRI G.B. SHANKARA RAO.—I have got something to say. Every member has the right to speak. But when the Speaker gets up, the members should resume their seats.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ನಾನು ಒಪ್ಪುತ್ತೇನೆ. ಮಾನ್ಯ ಅಧ್ಯಕ್ಷರು ಎದ್ದು ಂತಾಗ ನಾವು ಎದ್ದು ನಿಲ್ಲಬಾರದು. ಆದರೆ ಮಾನ್ಯ ಅಧ್ಯಕ್ಷರು ಕೂಡ ಕ್ಷಮಿಸಬೇಕು. ನಾವು ಒಂದು ವಿಚಾರವನ್ನು ಹೇಳುವಾಗ ಅದನ್ನು ಸಂಪೂರ್ಣವಾಗಿ ತಿಳಿದುಕೊಂಡು ನಂತರ ಅದರ ಮೇಲೆ ತೀರ್ಮಾನ ಮಾಡಬೇಕು. ತಾವು ಎದ್ದುನಿಂತು ನಿಲುವಳಿ ಸೂಚನೆಗೆ ಅನುಮತಿ ಕೊಡುವುದಿಲ್ಲವೆಂದು ನಿರ್ಣಯ ಕೊಟ್ಟರೆ...

SRI K.H. RANGANATH.—Is it the submission of the Hon. the Leader of the Opposition that the Chair has not heard him fully? It is a most uncharitable remark to the Chair. I take exception to this type of speeches.

SRI S.R. BOMMAI.—I am on my legs, I have not yielded. ಮಾನ್ಯ ಮಂತ್ರಿಗಳು ನನ್ನ ಮಾತನ್ನು ಅರ್ಥಮಾಡಿಕೊಂಡಿಲ್ಲ. ನಾನು ಹೇಳತಕ್ಕದ್ದನ್ನು ಹೇಳಿದ್ದೇನೆ. ಆದರೆ ಇನ್ನೂ ಅನೇಕ ಮಂದಿ ಮಾನ್ಯ ಸದಸ್ಯರು ಹೇಳತಕ್ಕವರಿದ್ದಾರೆ. ಇವತ್ತು ಅವರಿಗೆ ಹೇಳತಕ್ಕ ಅವಕಾಶ ಇಲ್ಲದೆ ತಾವು ನಿಂತು ನಿರ್ಣಯ ಕೊಟ್ಟರೆ ಅವರ ಅವಕಾಶ ಹೋಗಿಬಿಡುತ್ತದೆ. ಅದಕ್ಕೆ I request the Chair to extend the time of the House. ಇವತ್ತೇ ನಿರ್ಣಯ ಮಾಡಬೇಕಾದರೆ ಉಳಿದ ಸದಸ್ಯರುಗಳೆಲ್ಲ ಏನು ಹೇಳುತ್ತಾರೆ ಅದನ್ನೆಲ್ಲ ಕೇಳಿಕೊಂಡು ನಿರ್ಣಯಕೊಡಿ ಇಲ್ಲದಿದ್ದರೆ ನಾಳೆ ಕೊಡಿ.

MR. SPEAKER.—Both sides have talked over the matter. ಇದಕ್ಕೆ ಇಷ್ಟು ಹೊತ್ತು ಚರ್ಚೆ ಆಗಬೇಕಾದುದು ಇಲ್ಲ. ಇದು ಒಂದು ಅಭ್ಯಾಸ ಆಗುತ್ತಿದೆ. I will explain it. The motion should be restricted to a specific matter of recent occurrence. Before the ruling is given it is the usual practice to ascertain from the mover, the reasons for admissibility of the Motion. Such ascertaining is not obligatory of course, on the part of the Speaker, but it is only a practice. If there are any doubts they may be got clarified from the member who has tabled the Adjournment Motion and he may also give his views for or against it. Therefore, I feel there is no need to ascertain further information. I have heard for nearly 3½ hours. I feel this can be discussed when the Demands for Grants come up for discussion, I, therefore, withold my consent.

(Several Opposition Members gathered in the isle and shouted simultaneously).

The House is adjourned to meet at 1 P.M. the nextday

The House is adjourned at Twenty Five Minutes past Six of the Clock, to meet again at One of the Clock on Tuesday the 13th June 1978.